ಶ್ರೀ ಎಂ.ಪಿ. ಪ್ರಕಾಶ್ : ಸಿ.ಓ.ಡಿ ತನಿಖೆ ಮಾಡಿಸಿ ಬೇಕಾದರೆ ವಿವರವನ್ನು ತರಿಸಿಕೊಂಡು ನಾನು ಈ ದಿವಸವೇ ಕಾರ್ಯದರ್ಶಿಗಳಿಗೆ ಆದೇಶವನ್ನು ಕೂಡುತ್ತೇನೆ. ನಾನು ಮುಖ್ಯಕಾರ್ಯದರ್ಶಿಗಳಿಗೂ ಕೂಡ ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳುತ್ತೇನೆ.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜರವರು ಕನ್ನಡ ಚಿತ್ರೋದ್ಯಮದ ಬಗ್ಗೆ ಪ್ರಸ್ತಾಪ ಮಾಡುತ್ತೇನೆಂದು ಹೇಳಿದ್ದಿರಿ.

ರಾಜ್ಯದಲ್ಲಿ ಕನ್ನಡ ಚಿತ್ರಗಳ ಕಡ್ಡಾಯ ಪ್ರದರ್ಶನ

+ ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಾನು ನಿನ್ನೆ ಅದನ್ನು ಪ್ರಸ್ತಾಪ ಮಾಡಿದೆ. ಮಾನ್ಯ ಮುಖ್ಯಮಂತ್ರಿಗಳು ಇರಲಿಲ್ಲ. ನಾನು ತಮ್ಮ ಮೂಲಕ ಮುಖ್ಯಮಂತ್ರಿಯವರ ಗಮನವನ್ನು ಸೆಳೆಯುತ್ತಿದ್ದೇನೆ. ಕನ್ನಡ ಚಿತ್ರೋದ್ಯಮದ ಬಗ್ಗೆ ಕಡ್ಡಾಯ ಚಿತ್ರಗಳ ಪ್ರದರ್ಶನ ಆಗಬೇಕು ಎಂದು ಹೇಳಿ ಒಂದು ದೊಡ್ಡ ಹೋರಾಟ ನಡೆಯುತ್ತಿದೆ. ಈ ಬಗ್ಗೆ ತಾವೊಂದು ಸಭೆಯನ್ನು ತಾವು ಕರೆದಿದ್ದೀರಿ. ಸಭೆಯಲ್ಲಿ ಚಿತ್ರಮಂದಿರದ ಮಾಲೀಕರು, ವಿತರಕರು ಮತ್ತು ನಿರ್ಮಾಪಕರು ಎಲ್ಲರನ್ನೂ ಕರೆಯಿಸಿ ಏನೋ ಒಂದು ತೀರ್ಮಾನಕ್ಕೆ ಬಂದಿದೆ ಎಂದು ಹೇಳಿ ಸಂತೋಷವಾಗಿತ್ತು. ಇಂಥಿಂಥ ದಿವಸವೇ ಕಡ್ಡಾಯವಾಗಿ ಕನ್ನಡ ಚಿತ್ರಗಳು ಆರು ತಿಂಗಳು ಕಾಲ ಕಡ್ಡಾಯ ಚಿತ್ರಗಳ ಪ್ರದರ್ಶನ ಮಾಡಬೇಕು. ಪರಭಾಷಾ ಚಿತ್ರಗಳು ಇಲ್ಲಿ ಪ್ರದರ್ಶನ ಆಗಬೇಕಾದರೆ ಅವರ ರಾಜ್ಯದಲ್ಲಿ ಮೂರು ತಿಂಗಳ ಕಾಲ ಪ್ರದರ್ಶನ ಆದಮೇಲೆ ಇಲ್ಲಿಗೆ ಬರಬೇಕು ಎಂದು ಒಂದು ನೀತಿಯನ್ನು ಮಾಡಿ ತಮ್ಮ ನೀತಿಯನ್ನು ಅವರೆಲ್ಲಾ ಒಪ್ಪಿ ಹೋಗಿದ್ದರು. ಮತ್ತೆ ನೀತಿ ಏನು ಮಾಡಿದ್ದೀರಿ, ಒಂದು ತೀರ್ಮಾನ ಏನು ಕೈಗೊಂಡಿದ್ದೀರಿ, ಅದು ಮುರಿದುಬಿದ್ದು ಬೇರೆ ರೂಪ ತಾಳತಕ್ಕಂಥ ಸ್ಥಿತಿಗೆ ಬಂದಿದೆ. ಆದ್ದರಿಂದ ಕಡೆ ಚಿತ್ರ ಮಂದಿರದವರು ಒಂದು ಕಡೆ ಸತ್ಯಾಗ್ರಹ ಮಾಡುತ್ತಿದ್ದಾರೆ. ಮತ್ತೊಂದು ಕಡೆ ಕನ್ನಡ ಚಿತ್ರರಂಗ ತತ್ತರಿಸತ್ತಿದೆ. ಈ ಪರಿಸ್ಥಿತಿ ಇರುವಾಗ ಕಡ್ಡಾಯವಾಗಿ ಕನ್ನಡ ಚಿತ್ರಗಳ ಪ್ರದರ್ಶನ ಮಾಡುವುದಕ್ಕೆ ಸರ್ಕಾರದವರು ಪರಿಣಾಮಕಾರಿಯಾಗಿ ಪ್ರಾಮಾಣಿಕವಾದಂಥ ಒಂದು ಕಾಯ್ದೆಯೇನಾದರೂ ಮಾಡುತ್ತೀರೋ? ಈ ಸದನದಲ್ಲಿ ತಾವು ಕಾಯ್ದೆ ತರುವುದಾದರೆ ಸಂತೋಷ. ನಾವೆಲ್ಲಾ ಅದಕ್ಕೆ ಬೆಂಬಲ ಕೊಡುತ್ತೇವೆ. ಆದರೆ ಮತ್ತೊಂದು ತಮ್ಮ ಗಮನಕ್ಕೆ ಬರಬೇಕಾದ್ದು ಎಂದರೆ ಬೇರೆ ಯಾವ ರಾಜ್ಯದಲ್ಲೂ ಕನ್ನಡ ಚಿತ್ರಪ್ರದರ್ಶನ ಇಲ್ಲ. ಕೇರಳದಲ್ಲಾಗಲಿ, ಆಂಧ್ರದಲ್ಲಾಗಲಿ, ತಮಿಳುನಾಡಿನಲ್ಲಾಗಲೀ, ಗೋವಾದಲ್ಲಾಗಲಿ ಎಲ್ಲೂ ಇಲ್ಲ. ಕರ್ನಾಟಕದಲ್ಲಿ ಮಾತ್ರ ಪರಭಾಷಾಚಿತ್ರಗಳು ಧಾರಾಳವಾಗಿ ನೂರು ದಿನ ಇಲ್ಲಿ ಓಡುತ್ತವೆ. ವರ್ಷಗಟ್ಟಲೇ ಓಡುತ್ತವೆ. ಯಾರು ಅದಕ್ಕೆಅಡ್ಡಿಆತಂಕ ಇಲ್ಲ. ಈ ಪರಿಸ್ಥಿತಿ ಇರುವುದರಿಂದ ಪರಭಾಷಾ ಚಿತ್ರಗಳನ್ನು ಸಂಪೂರ್ಣವಾಗಿ ಬಹಿಷ್ಕಾರ ಮಾಡುವ ಒಂದು ನೀತಿಯನ್ನು ಸರ್ಕಾರ ಮಾಡಬೇಕೆಂದು ನನ್ನ ಒತ್ತಾಯ. ಏಕೆಂದರೆ ಚಿತ್ರಗಳ ಬಗ್ಗೆ ಶ್ರೀಮಾನ್ ನಾಣಯ್ಯನವರು ಅನೇಕ ರೀತಿಯಲ್ಲಿ ಮಾತನಾಡಿದ್ದಾರೆ. ಮತ್ತು ನಾಣಯ್ಯನವರಿಗೂ ಗೊತ್ತಿದೆ. ತಾವು. ಸೇರಿ ಸಭೆಯನ್ನು ಮಾಡಿದ್ದೀರಿ. ನನಗನಿಸುತ್ತದೆ, ಈಗ ನೇರವಾಗಿ ಮಾಡಬೇಕಾಗಿರುವುದು ಮೊದಲನೆಯದಾಗಿ ಪರಭಾಷಾ ಚಿತ್ರಗಳನ್ನು ಬಹಿಷ್ಕಾರ ಮಾಡಬೇಕು, ಸರ್ಕಾರವೇ ನಿರ್ಧಾರ ಕೈಗೊಳ್ಳಬೇಕು ನನ್ನ ಪ್ರಕಾರ.

ತಾವು ಏನು ಮಾಡುತ್ತಿರಿ, ಅದು ನಿಮಗೆ ಹೇಳಿದ್ದುದು. ಆದರೆ ಬೇರೆ ರಾಜ್ಯದಲ್ಲಿ ಕನ್ನಡ ಚಿತ್ರಪ್ರದರ್ಶನ ಮಾಡದೇ ಇರುವಾಗ ಕರ್ನಾಟಕದಲ್ಲೂ ಎಲ್ಲಾ ಭಾಷೆಯ ಚಿತ್ರಪ್ರದರ್ಶನವಾಗಲಿ ಎಂದರೆ ಇದೊಂದು ಭತ್ರವಾಗಬಾರದು. ಕರ್ನಾಟಕ ಒಂದು ಧರ್ಮಭತ್ರವಾಗಬಾರದು. ಯಾರು ಬಂದು, ಏನು ಬೇಕಾದರೂ ಮಾಡುವ ರೀತಿ ಭತ್ರವಾಗಬಾರದು. ಆದ್ದರಿಂದ ಕನ್ನಡ ಚಿತ್ರೋದ್ಯಮದ ಬೆಳವಣಿಗೆಯ ದೃಷ್ಟಿಯಿಂದ ಪರಿಣಾಮಕಾರಿಯಾದ ಕ್ರಮ ಕೈಗೊಳ್ಳಬೇಕಾದ್ದರಿಂದ ನೀವು ಕನ್ನಡ ಚಿತ್ರಗಳ ಪ್ರದರ್ಶನವನ್ನು ಮಾಡುವುದಕ್ಕೆ ಒಂದು ಕಾರ್ಯಯನ್ನೇ ತರಬೇಕು. ಮತ್ತು ಎರಡನೆಯದಾಗಿ ಚಿತ್ರಮಂದಿರಗಳು ಅದರ ವ್ಯವಸ್ಥೆ ಇವತ್ತು ರೇಟ್ ಏನಾಗಿದೆ 30 ರೂಪಾಯಿ, 40 ರೂಪಾಯಿ. ಗರಿಷ್ಠ ಒಂದು ಪ್ರವೇಶದರ 40 ರೂಪಾಯಿ ಆಗಿದೆ. ಅದನ್ನು ಸಾಮಾನ್ಯ ಜನರು ಕೊಡತಕ್ಕಂಥದಲ್ಲ. ಕನಿಷ್ಠ ಹತ್ತು ರೂಪಾಯಿ ಗರಿಷ್ಠ 40 ರೂಪಾಯಿ ಎಂದು ಹೇಳಿದರೆ ಯಾರೂ ಅದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ತಮಗೆ ಏನು ಹೇಳುತ್ತೇನೆ, ಇದರ ದರವನ್ನು ಇಳಿಸುವ ನಿರ್ಧಾರವನ್ನು ಸರ್ಕಾರ ಕೈಗೊಳ್ಳಬೇಕು. ಮತ್ತು ಥಿಯೇಟರಗಳು ಹವಾ ನಿಯಂತ್ರಣ ಎಂದು ಹೇಳುತ್ತಾರೆ. ಅಲ್ಲಿ ಯಾವುದೇ ಒಂದು ವ್ಯವಸ್ಥೆ ಇರುವುದಿಲ್ಲ. ಥಿಯೇಟರಗಳ ವ್ಯವಸ್ಥೆ ಸರಿ ಇಲ್ಲ. ಇವೆಲ್ಲವನ್ನೂ ಪರ್ಯಾಲೋಚಿಸಿ ಕನ್ನಡ ಚಿತ್ರೋದ್ಯಮದ ಬೆಳವಣಿಗೆಗಾಗಿ ಅನೇಕ ಯೋಜನೆಗಳನ್ನು ನಾವು ಹಾಕಿಕೊಂಡಿದ್ದೇವೆ. ಕಡ್ಡಾಯವಾಗಿ ಕನ್ನಡ ಚಿತ್ರಗಳ ಪ್ರದರ್ಶನವಾಗಲಿಲ್ಲ ಎಂದರೆ ಆ ಯೋಜನೆಗಳೆಲ್ಲಾ ಮುರಿದು ಬೀಳುತ್ತವೆ. ಆದ್ದರಿಂದ ತಮಗೆ ತಮ್ಮ ಮೂಲಕ ಸರ್ಕಾರಕ್ಕೆ ಕಳಕಳಿಯಿಂದ ನಾನು ಮನವಿಯನ್ನು ಮಾಡುತ್ತಿದ್ದೇನೆ, ನೀವು ಸರ್ಕಾರದ ನೀತಿಯೇನು? ಕನ್ನಡ ಚಿತ್ರಗಳನ್ನು ಕಡ್ಡಾಯವಾಗಿ ಪ್ರದರ್ಶನ ಮಾಡುವುದಕ್ಕೆ ಸರ್ಕಾರದ ನೀತಿಯೇನು ಎನ್ನುವುದನ್ನು ತಾವು ಸ್ಪಷ್ಟಪಡಿಸಬೇಕು ಎಂದು ತಮ್ಮ ಮೂಲಕ ನಾನು ಕೇಳುತ್ತಿದ್ದೇನೆ.

+ ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ಸಚಿವರು) : ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ವಾಟಾಳ್ ನಾಗರಾಜರವರು ಎತ್ತಿರುವ ಈ ಪ್ರಶ್ನೆ ಕಳೆದ ಸುಮಾರು ಒಂದೂವರೆ ತಿಂಗಳಿಂದ ಚಿತ್ರ ನಿರ್ಮಾಪಕರಿಗೂ ಮತ್ತು ಪ್ರದರ್ಶನಕಾರರಿಗೂ ಸ್ವಲ್ಪಮಟ್ಟಿಗೆ ಭಿನ್ನಾಭಿಪ್ರಾಯಬಂದಿದೆ. ಈ ಭಿನ್ನಾಭಿಪ್ರಾಯ ಬರುವುದಕ್ಕೆ ಮೊದಲನೆ ಕಾರಣ ನಾಟಕ ರಾಜ್ಯದಲ್ಲಿರತಕ್ಕಂಥ ಈ ಪ್ರದರ್ಶನಕಾರರು ಯಾರು ಇದ್ದಾರೆ, ಅವರು ಪರಭಾಷೆಯ ಚಿತ್ರಗಳನ್ನು ಕನ್ನಡದಲ್ಲಿ ಬಿಡುಗಡೆ ಮಾಡುವಾಗ ಕನ್ನಡ ಚಲನಚಿತ್ರಗಳು ಮತ್ತು ಪರಭಾಷೆಯ ಚಿತ್ರಗಳು ಒಟ್ಟೊಟ್ಟಿಗೆ ಏಕಕಾಲದಲ್ಲಿ ಬಿಡುಗಡೆಯಾಗಬಾರದು ಎನ್ನುವ ಹಿನ್ನೆಲೆಯಲ್ಲಿ ಶುರುವಾಗಿರುವುದು. ಇದಕ್ಕೆ ಕಾರಣ ಪ್ರದರ್ಶನಕಾರರು ಮತ್ತು ಅವರೊಳಗೆ ಅವರು ಚರ್ಚೆ ಅದರಲ್ಲಿ ಒಂದು ಈ ಚಲನಚಿತ್ರಮಂದಿರದಲ್ಲಿರುವ ಪ್ರವೇಶದರ ಯಾವುದು ಇದೆ, ಅದನ್ನು ಕಡಿಮೆ ಮಾಡಬೇಕು. 20 ರೂಪಾಯಿ ಒಳಗಡೆ ಇರಬೇಕು, 18 ರೂಪಾಯಿ ಒಳಗಡೆ ಇರಬೇಕು, ಈಗ ಕೆಲವು ಚಿತ್ರಮಂದಿರಗಳಲ್ಲಿ 25 ರಿಂದ 30 ರೂ.ವರೆಗೂ ಇದೆ. ಇದು ಬಹಳ ದುಬಾರಿಯಾಗಿದೆ. ಇದನ್ನು ಕಡಿಮೆ ಮಾಡಬೇಕು ಎನ್ನುವುದು ಒಂದು. ಕನ್ನಡ ನಾಡಿನಲ್ಲಿರುವ ಎಲ್ಲಾ ಥಿಯೇಟರಗಳಲ್ಲೇ ಆರು ತಿಂಗಳವರೆಗೆ ಕನ್ನಡ ಚಲನಚಿತ್ರಗಳನ್ನೇ ಪ್ರದರ್ಶನ ಮಾಡಬೇಕು ಎನ್ನುವುದು. ಇದು ಎರಡನೆದು. ಮೂರನೆಯದು ಅವರು ಕೇಳಿರುವುದು ಬಹಳ ಪ್ರಾಮುಖ್ಯವಾಗಿರುವುದು ಯಾವುದಾದರೂ ಒಂದು ಪರಬಾಷೆಯ ಚಿತ್ರ ಅದು ತಮಿಳೇ ಆಗಲೀ, ತೆಲುಗೇ ಆಗಲಿ, ಹಿಂದಿಯೇ

ಆಗಲಿ ಅದನ್ನು ನಿರ್ಮಾಪಕರು ನಿರ್ಮಾಣ ಮಾಡಿಯಾದ ಮೇಲೆ ಕನ್ನಡ ನಾಡಿನಲ್ಲಿ ಅದು ಬಿಡುಗಡೆಯಾಗಬೇಕಾದರೆ ಯಾವ ಯಾವ ಪ್ರದೇಶಗಳಲ್ಲಿ ಅದು ನಿರ್ಮಾಣವಾಗಿತ್ತು, ಅಲ್ಲಿ ಅದು ಹನ್ನೆರಡುವಾರ ಕಳೆದ ಮೇಲೆ ಮಾತ್ರ ನಮ್ಮ ಕರ್ನಾಟಕ ರಾಜ್ಯಕ್ಕೇ ಬರಬೇಕು. ಅದರೊಳಗೆ ಬರಕೂಡದು ಎಂದು ಹೇಳುವಂಥದ್ದು. ಇನ್ನೂ ಬಹಳ ಪ್ರಮುಖವಾಗಿರುವ ವಿಚಾರಗಳು. ಬಗ್ಗೆ ಮಾತುಕತೆ ನಡೆದ ಮೇಲೆ ಎಲ್ಲಾದಕ್ಕೂ ಸಹಮತ ಬಂದು ಒಂದಕ್ಕೆ ಮಾತ್ರ ಸಹಮತ ಬರಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಕರೆದಿರತಕ್ಕಂಥ ಸಭೆಯಲ್ಲಿ ಪ್ರದರ್ಶನಕಾರರು ಒಂದು ಕಡೆ, ಇನ್ನೊಂದು ಕಡೆ ನಿರ್ಮಾಪಕರು. ಅಂದು ಡಾ. ರಾಜ್‌ಕುಮಾರ್‌ರವರು ಇದ್ದರು. ಈ ಸಭೆಯಲ್ಲಿ ಚರ್ಚೆ ನಡೆಯಿತು. ನಡೆದಾಗ ಅವರು ಹೇಳಿದರು, ನಮಗೆಲ್ಲದರಲ್ಲಿಯೂ ಸಹಮತ ಬಂದಿದೆ, ಆದರೆ ಒಂದಕ್ಕೆ ಮಾತ್ರ ಸಹಮತ ಬರಲಿಲ್ಲ, ಅದು ಯಾವುದೆಂದೆ ಪರಭಾಷಾ ಚಿತ್ರಗಳು ಕನ್ನಡನಾಡಿನಲ್ಲಿ ಏಕಕಾಲದಲ್ಲಿ ಕನ್ನಡ ಚಿತ್ರವನ್ನು ನಾವು ಬಿಡುಗಡೆ ಮಾಡುವ ಸಂದರ್ಭದಲ್ಲಿ ಬಿಡುಗಡೆಯಾಗಬಾರದು ಎಂದು ಹೇಳುವುದಕ್ಕೆ ಅವರವರಲ್ಲಿ ಸಹಮತ ಬರಲಿಲ್ಲ. ಅದಕ್ಕೆ ಕಾರಣವೇನೆಂದರೆ ಕನ್ನಡ ನಾಡಿನಲ್ಲಿರುವ ಎಲ್ಲಾ ಚಿತ್ರಮಂದಿರಗಳಲ್ಲಿಯೂ ಮತ್ತು ಬೆಂಗಳೂರಿನಲ್ಲಿರುವ ಎಲ್ಲಾ ಚಿತ್ರಮಂದಿರಗಳಲ್ಲಿ ಕನ್ನಡವೇ ಹಾಕಬೇಕು ಎಂದರೆ ಕನ್ನಡ ಚಿತ್ರಗಳು ಇಲ್ಲ. ಕನ್ನಡ ಚಿತ್ರಗಳು ಇಲ್ಲ. ಎರಡನೆಯದಾಗಿ ಕನ್ನಡ ಚಿತ್ರಗಳ ನಿರ್ಮಾಣ ಯಾವುದು ಇದೆ, ಅದು ಹೊಸಹೊಸ ಚಿತ್ರಗಳು ಬಂದು ನಮ್ಮ ಥಿಯೇಟರಗಳಲ್ಲಿ ಒಂದು ವಾರ,ಎರಡು ವಾರ ಕಳೆದಾದಮೇಲೆ ಅದು ನಡೆಯುವುದೇ ಇಲ್ಲ.

ಮೂರನೆಯದಾಗಿ ಇಂತಹ ಪರಿಸ್ಥಿತಿಯಲ್ಲಿ ಕನ್ನಡ ಚಿತ್ರಗಳನ್ನು ನೀವು ಕಡ್ಡಾಯವಾಗಿ ಕರ್ನಾಟಕದ ಚಲನಚಿತ್ರ ಮಂದಿರಗಳಲ್ಲಿ ಆರು ತಿಂಗಳ ಕಾಲ ನಡೆಸಬೇಕೆಂದು ತಿಂಗಳುಗಳ ಕಾಲ ನಡೆಸಬೇಕೆಂದು ಹೇಳುವ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದರೆ, ಬಹುತೇಕ ನಮ್ಮ ಚಲನ ಚಿತ್ರಗಳ ಮಂದಿರಗಳಲ್ಲಿ ಇದನ್ನು ನಾವು ನಡೆಸಲಿಕ್ಕೆ ಆಗದೇ ಇರತಕ್ಕಂತಹ ಪರಿಸ್ಥಿತಿಯು ನಿರ್ಮಾಣವಾಗಿ, ನಾವು ಸರ್ಕಾರಕ್ಕೆ ಟ್ಯಾಕ್ಸಗಳನ್ನು ಕಟ್ಟತಕ್ಕಂಥದ್ದು ಹೇಗೆ? ಎಂದು ಹೇಳುತ್ತಾ ಇರತಕ್ಕಂಥದ್ದು ಚರ್ಚೆ ಬಂತು. ಕಡೆಗೆ ವಾದ ವಿವಾದ ನಡೆದು ಆದ ಮೇಲೆ ಏಕಕಾಲ ಎಂದು ಹೇಳುತ್ತಾ ಇರತಕ್ಕಂಥದ್ದಕ್ಕೆ, ಏಕ ಕಾಲದಲ್ಲಿ ಬಿಡುಗಡೆಯಾಗುತ್ತಿರುವುದಕ್ಕೆ ಸೀಮಿತವಾಗಿರತಕ್ಕಂಥ ಪ್ರಶ್ನೆ ಇವತ್ತು ಶ್ರೀಮಾನ್ ವಾಟಾಳ್ ನಾಗರಾಜರವರದ್ದು. ನಾನು ಆ ಸಂದರ್ಭದಲ್ಲಿ ಏನು ಹೇಳಿದೆ ಎಂದರೆ ಕನ್ನಡ ಚಿತ್ರೋದ್ಯಮಕ್ಕೆ ಸಂಬಂಧಪಟ್ಟಿರತಕ್ಕಂತಹ ಪ್ರದರ್ಶನಕಾರರು, ವಿತರಣಾಕಾರರು, ನಿರ್ಮಾಪಕರು, ನಿರ್ದೇಶಕರು ಇವರೆಲ್ಲರೂ ಒಟ್ಟಾರೆ ಸೇರಿದರೆ ನಮ್ಮ ಕನ್ನಡ ಚಲನಚಿತ್ರ ಉದ್ಯಮ. ಆದುದರಿಂದ ನಿಮ್ಮಲ್ಲಿಯೇ ದಯವಿಟ್ಟು ಭಿನ್ನಾಭಿಪ್ರಾಯಗಳು ಬೇಡ. ಎಲ್ಲರೂ ಒಟ್ಟಾರೆ ಸೇರಿ ತಾವು ಸಮಗ್ರ ತೀರ್ಮಾನಕ್ಕೆ ಬರುವುದು ಉತ್ತಮ. ಸರ್ಕಾರ ಮಧ್ಯೆ ಪ್ರವೇಶಿಸಿ ಮಾಡಬೇಕಾಗಿರತಕ್ಕಂಥದ್ದು ಏನು ಇಲ್ಲ. ಕರ್ನಾಟಕದಲ್ಲಿ ಕನ್ನಡ ಚಿತ್ರ ಉದ್ಯಮವನ್ನು ಬೆಳೆಸಲಿಕ್ಕೆ ಇರತಕ್ಕಂತಹ ಜವಾಬ್ದಾರಿತನವನ್ನು ಹೊತ್ತಿರತಕ್ಕಂಥವರು ನೀವುಗಳು.

ಚಿತ್ರರಂಗವನ್ನು ಎತ್ತರಕ್ಕೆ ಏರಿಸಿ ಗುಣಮಟ್ಟದ ಚಿತ್ರಗಳನ್ನು ನಿರ್ಮಾಣ ಮಾಡಿ ಕನ್ನಡ ನಾಡಿನಲ್ಲಿರತಕ್ಕಂಥ ಎಲ್ಲಾ ಜನರು ಕನ್ನಡ ಚಿತ್ರಗಳನ್ನೇ ನೋಡಬೇಕು. ಈ ಚಿಂತನೆಗೆ ಪೂರಕವಾಗಿ

ಸರ್ಕಾರದ ವತಿಯಿಂದ ಕೊಡಬೇಕಾಗಿರುವಂತಹ ಸಹಾಯಧನವಾಗಲಿ, ಅಥವಾ ಟ್ಯಾಕ್ಸ್ ರಿಲೀಫ್ ಆಗಲಿ ಅದನ್ನು ಕೊಡಲಿಕ್ಕೆ ಇರತಕ್ಕಂಥಹ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಾ ಬಂದಿದ್ದೇವೆ ಎಂದು ಹೇಳಿದ್ದೆವು. ಆಮೇಲೆ ಅವರುಗಳಲ್ಲಿ ವಾದ ವಿವಾದಗಳು ಎಲ್ಲಾ ನಡೆದು ಒಪ್ಪಿಗೆಯಾದ ಮೇಲೆ 12 ವಾರಗಳ ನಂತರ ಏಕಕಾಲದಲ್ಲಿ ಬಿಡುಗಡೆ ಮಾಡಬೇಕು ಎಂದು ಹೇಳಿದ್ದಕ್ಕೆ ಪ್ರದರ್ಶನಕಾರರ ಪರವಾಗಿ ಮಾತನಾಡಿದಂಥಹವರು ಅದನ್ನು 4 ವಾರಗಳ ಕಾಲ ಮಾಡಿದರು. ಇಲ್ಲಿ ಕರ್ನಾಟಕದಲ್ಲಿ ಪರಭಾಷಾ ಚಿತ್ರಗಳು ಬಿಡುಗಡೆಯಾಗಬೇಕಾದರೆ 4 ವಾರಗಳು ಕಳೆದ ನಂತರ ನಮ್ಮ ಕರ್ನಾಟಕ ದಲ್ಲಿರತಕ್ಕಂಥಹ ಬಹುತೇಕ ಚಿತ್ರಮಂದಿರಗಳನ್ನು ನಾವುಗಳು ಮುಚ್ಚಬೇಕಾಗುತ್ತದೆ, ಮತ್ತು ಮುಚ್ಚಿದರೂ ಸಹ ಸರ್ಕಾರಕ್ಕೆ ನಾವು ಟ್ಯಾಕ್ಸ್‌ನ್ನು ಕಟ್ಟಬೇಕಾಗುತ್ತದೆ ಎನ್ನುವ ವಾದವನ್ನು ಮಾಡಿದರು. ಕಡೆಗೆ ಮಾತುಕತೆಗಳು ನಡೆದ ಮೇಲೆ 4 ವಾರಗಳ ನಂತರ ಕರ್ನಾಟಕದಲ್ಲಿ ಬಿಡುಗಡೆ ಮಾಡುವುದಾಗಿ ಆಯಿತು. ಇನ್ನೊಂದು ಸಂದರ್ಭದಲ್ಲಿ 8 ವಾರಗಳ ನಂತರ ಕರ್ನಾಟಕದಲ್ಲಿ ಪರಭಾಷಾ ಚಿತ್ರಗಳನ್ನು ಬಿಡುಗಡೆ ಮಾಡುವುದಾಗಿ ಎಂದು ಆಯಿತು. ಕಡೆಗೆ ಒಂದು ಮಧ್ಯಸ್ಥಿಕೆ ಎಂದು ಹೇಳುವ ಸಂದರ್ಭ ಬಂದಾಗ 7 ವಾರಗಳ ನಂತರ ಏಕ ಕಾಲದಲ್ಲಿ ಕರ್ನಾಟಕದಲ್ಲಿ ಪರಭಾಷಾ ಚಿತ್ರಗಳನ್ನು ಬಿಡುಗಡೆ ಮಾಡುವುದಾಗಿ ಒಂದು ಅಭಿಪ್ರಾಯ ಆ ಚರ್ಚೆಯ ಕಾಲದಲ್ಲಿ ಬಂತು. ಆದರೆ ಪ್ರದರ್ಶನಕಾರರ ಪರವಾಗಿ 7 ವಾರಗಳ ನಂತರ ಪರಭಾಷಾ ಚಿತ್ರಗಳನ್ನು ಕರ್ನಾಟಕದಲ್ಲಿ ಬಿಡುಗಡೆ ಮಾಡಿದರೆ ನಮಗೆ ಕಷ್ಟವಾಗುತ್ತದೆ ಎನ್ನುವ ಅಭಿಪ್ರಾಯವನ್ನು ಹೇಳಿದರು. ಈ ಒಂದು ಚರ್ಚೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ನಾನು ಸಭೆಯಲ್ಲಿ ಭಾಗವಹಿಸಿದ್ದೆವು. ಮತ್ತು ಮಾನ್ಯ ಮುಖ್ಯಮಂತ್ರಿಗಳು ಈ ಸಂದರ್ಭದಲ್ಲಿ ಒಂದು ಸಲಹೆಯನ್ನೂ ಸಹ ಕೊಟ್ಟರು ಏನೆಂದರೆ ನಿಮ್ಮಲ್ಲಿರತಕ್ಕಂಥಹ ಈ ವಿಚಾರಗಳ ಜೊತೆಗೆ ಸಮಗ್ರವಾಗಿ ಇರತಕ್ಕಂಥಹ ವಿಚಾರಗಳನ್ನು ಚರ್ಚೆ ಮಾಡುವುದಕ್ಕೆ ನಾನು ಪ್ರಧಾನ ಕಾರ್ಯದರ್ಶಿಗಳ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚನೆಯನ್ನು ಮಾಡೋಣ, ಆ ಸಮಿತಿಯಲ್ಲಿ ಪ್ರದರ್ಶನಕಾರರ ಪರವಾಗಿ ಇಬ್ಬರು ಸದಸ್ಯರು, ವಿತರಕರ ಪರವಾಗಿ ಇಬ್ಬರು ಸದಸ್ಯರು, ನಿರ್ಮಾಪಕರ ಪರವಾಗಿ ಇಬ್ಬರು ಸದಸ್ಯರು, ನಿರ್ದೇಶಕರ ಪರವಾಗಿ ಇಬ್ಬರು ಸದಸ್ಯರು ಇವು ನಾಲ್ಕು ಅಂಗಗಳು ಇರತಕ್ಕಂಥವರು ಇದ್ದು ಮತ್ತು ಪ್ರಧಾನ ಕಾರ್ಯದರ್ಶಿಗಳು ಸೇರಿ ನಿಮ್ಮಲ್ಲಿರತಕ್ಕಂಥಹ ಎಲ್ಲಾ ವಿಚಾರಗಳನ್ನು ಅಲ್ಲಿ ಚರ್ಚೆ ಮಾಡಿ, ಒಂದು ಒಮ್ಮತದ ತೀರ್ಮಾನಕ್ಕೆ ಬರಲಿಕ್ಕೆ ನಾವು ಸರ್ಕಾರದ ವತಿಯಿಂದ ಏನು ಮಾಡುಲಿಕ್ಕೆ ಸಾಧ್ಯವಿದೆ ಎನ್ನುವ ಯೋಚನೆಯನ್ನು ಮಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಒಂದು ಸಲಹೆಯನ್ನು ಕೊಟ್ಟರು. ಹಾಗೆ ಸಲಹೆ ಕೊಟ್ಟಂತಹ ಕಾಲದಲ್ಲಿ ಯಾವುದೇ ನಿರ್ಮಾಪಕರು ಮಾಡಿರತಕ್ಕಂತಹ ಚಿತ್ರಗಳ ಬಿಡುಗಡೆ ಮಾಡುವುದಿಲ್ಲ ಎನ್ನತಕ್ಕಂಥಹ ಮಾತು ಕೂಡ ಆ ಸಭೆಯಲ್ಲಿ ಬಂತು. ಆ ಸಂದರ್ಭದಲ್ಲಿ ನಾವು ಏನು ಹೇಳಿದ್ದೇವು ಎಂದರೆ, ಒಂದು ಸಮಿತಿಯವರು ಒಂದು ತೀರ್ಮಾನವನ್ನು ಮಾಡುವವರೆಗೆ ನೀವು ಮಾಡಿರುವಂತಹ ಒಂದು ನಿರ್ಬಂಧವನ್ನು ಹಿಂದಕ್ಕೆ ತೆಗೆದುಕೊಳ್ಳಿ. ಮಾನ್ಯ ಮುಖ್ಯಮಂತ್ರಿಗಳು ಇದನ್ನು ಬಗೆಹರಿಸುವುದಕ್ಕೆ ಪ್ರಯತ್ನಿಸುವೆ ಎಂಬ ಭರವಸೆಯನ್ನು ಕೊಟ್ಟರು ಕೂಡ ಬಹುಶಃ ಅವರ ಒಳಗೆ ಮಾತಿನ ಆಚೆಕಡೆ ಕಡೆ ವಿವಾದ ನಡೆದು, ಇಲ್ಲ ಇದರ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ. 12 ವಾರದ ಬದಲು 8 ವಾರಗಳ

ನಂತರ ಪರಭಾಷಾ ಚಿತ್ರಗಳು ಕರ್ನಾಟಕದಲ್ಲಿ ಬಿಡುಗಡೆ ಯಾಗಲಿ ಎಂದು ಪ್ರಶ್ನೆ ಬಂದು, ಕಡೆಗೂ 7 ವಾರಗಳು ಎಂದು ಒಂದು ತೀರ್ಮಿನಕ್ಕೆ ಬಂದಿತು. ಆದರೆ ಕೆಲವು ಪ್ರದರ್ಶನಕಾರರು ಈ ವಾದವನ್ನು ಒಪ್ಪಲಿಲ್ಲ. ಸರ್ಕಾರದ ವತಿಯಿಂದ ಟ್ರಯಲ್ ಬೇಸಿಸ್ ಮೇಲೆ ಎರಡು ಕಡೆಯಲ್ಲಿ ಇರತಕ್ಕಂತಹ ಕಷ್ಟವನ್ನು ನೋಡಿ ಅನ್ ಟ್ರಯಲ್ ಬೇಸಿಸ್ ಮೇಲೆ ಇದನ್ನು ಸ್ವಲ್ಪ ಮಟ್ಟಿಗೆ ನೀವು ಮಾಡಿ ಎಂದು ಹೇಳಿದ ಮೇಲೆ ನಾನು ಮತ್ತು ಮಾನ್ಯ ಮುಖ್ಯಿ ಮಂತ್ರಿಗಳು ಇದರ ಬಗ್ಗೆ ಚರ್ಚೆ ಮಾಡಿ ಆದಮೇಲೆ ಪತ್ರಿಕೆಯ ಹೇಳಿಕೆಯನ್ನು ನಾನೇ ಕೊಟ್ಟೆ. ಕೊಟ್ಟ ನಂತರ 7 ವಾರಗಳವರೆಗೆ ಪರಭಾಷಾ ಚಿತ್ರಗಳು ಕರ್ನಾಟಕ ರಾಜ್ಯದಲ್ಲಿ ಏಕಕಾಲದಲ್ಲಿ ಬಿಡುಗಡೆ ಮಾಡಬಾರದು ಪ್ರದರ್ಶನಕಾರರು ಇದರ ಬಗ್ಗೆ ಚಿಂತನೆಯನ್ನು ಮಾಡಬೇಕು ಎಂದು ಒಂದು ತೀರ್ಮಾನಕ್ಕೆ ಬಂದಿದೆ. ಹೇಳಿದಾಗ, ಕೆಲವು ಪ್ರದರ್ಶನಕಾರರು ದಿವಸ ಒಪ್ಪಿರಲಿಲ್ಲ. ಅದನ್ನು ಸಹ ನೇರವಾಗಿ ಈ ಸಭೆಗೆ ಹೇಳಬೇಕಾಗುತ್ತದೆ. ಮಾರನೆಯ ದಿವಸ ಪತ್ರಿಕೆಯಲ್ಲಿ ಹೇಳಿಕೆ ಬಂದ ಮೇಲೆ ಪ್ರದರ್ಶನಕಾರರು ಮಾನ್ಯ ಮುಖ್ಯಮಂತ್ರಿಗಳಿಗೆ ನೇರವಾಗಿ ಒಂದು ಮನವಿಯನ್ನು ಅರ್ಪಿಸಿ.8 ವಾರಗಳವರೆಗೆ ಏಕಕಾಲದಲ್ಲಿ ಬಿಡುಗಡೆ ಆಗಬೇಕೆಂದು ತೀರ್ಮಾನವಾದರೆ, ನಾವು ಇವತ್ತಿನ ಸ್ಲಾಬ್ ಸಿಸ್ಟಂ ಯಾವುದು ಇದೆ, ಇದರ ಅಡಿಯಲ್ಲಿ ನಮ್ಮ ಕರ್ನಾಟಕದಲ್ಲಿರತಕ್ಕಂತಹ ಚಲನಚಿತ್ರಮಂದಿರಗಳಲ್ಲಿ ಕನ್ನಡ ಚಲನ ಚಿತ್ರಗಳನ್ನು ಪ್ರದರ್ಶಿನ ಮಾಡಬೇಕೆಂದು ಹೇಳಿ ನಾವು ಮಾಡಿಸುತ್ತೇವೆ, ಬಹಳಷ್ಟು ಚಲನ ಚಿತ್ರಗಳು ಒಂದು ವಾರ ಎರಡು ವಾರಗಳ ಕಾಲವು ಪ್ರದರ್ಶನವನ್ನು ಮಾಡಲು ಸಾಧ್ಯವಾಗದಂತಹ ಪರಿಸ್ಥಿತಿಯು ನಿರ್ಮಾಣವಾದಾಗ ನಮ್ಮ ಚಲನಚಿತ್ರಗಳು, ನಮ್ಮ ಚಲನಚಿತ್ರ ಮಂದಿರಗಳು ಏನಾಗುತ್ತಿವೆ ಎನ್ನುವುದರ ಬಗ್ಗೆ ತಾವುಗಳು ಗಮನವನ್ನು ಹರಿಸಿ ಎಂದು ಹೇಳಿದರು. ಒಂದು ಕಡೆ ಸಾಧಾರಣವಾಗಿರತಕ್ಕಂತಹ ಒಮ್ಮತವು ಬಂದರೂ ಕೂಡ ಮಾರನೆಯ ದಿವಸ ಅವರಲ್ಲಿ ಭಿನ್ನಾಭಿಪ್ರಾಯವು ಹೆಚ್ಚು ಹೆಚ್ಚಾಗಿ ಬಂದಿರತಕ್ಕಂತಥದ್ದು ತಮ್ಮ ಗಮನಕ್ಕೆ ಬಂದಿದೆ. ಅಲ್ಲಿಂದ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಪತ್ರಿಕಾ ಹೇಳಿಕೆಯನ್ನು ಕೊಡಲು ಶುರುಮಾಡಿದರು. ಮಾನ್ಯ ಅಧ್ಯಕ್ಷರೆ, ನೇರವಾಗಿ ಸರ್ಕಾರದವರು 6 ತಿಂಗಳುಗಳವರೆಗೆ ಕಡ್ಡಾಯವಾಗಿ ಕರ್ನಾಟಕದಲ್ಲಿರತಕ್ಕಂತಹ ಎಲ್ಲಾ ಚಲನಚಿತ್ರ ಮಂದಿರಗಳು ಕನ್ನಡ ಚಿತ್ರಗಳನ್ನೇ ಪ್ರದರ್ಶಿಸಬೇಕು ಎಂದು ಒಂದು ಕಾನೂನನ್ನು ತರಬೇಕು ಎನ್ನುವ ಚಿಂತನೆಯನ್ನು ನಮ್ಮ ಸ್ನೇಹಿತರು ಇಟ್ಟಿದ್ದಾರೆ ಮಾನ್ಯ ಅಧ್ಯಕ್ಷರೆ, ಕರ್ನಾಟಕದಲ್ಲಿ ಕನ್ನಡ ಚಲನಚಿತ್ರ ಇನ್ನು ಹೆಚ್ಚು ಎತ್ತರಕ್ಕೆ ಬೆಳೆಯಬೇಕು. ಪರಭಾಷಾ ಚಿತ್ರಗಳ ಜೊತೆಯಲ್ಲಿ ಕನ್ನಡ ಚಲನಚಿತ್ರಗಳು ಪೈಪೋಟಿಯನ್ನು ಮಾಡಬೇಕಾಗುತ್ತದೆ. ತೆಲುಗು, ತಮಿಳು, ಹಿಂದಿ ಚಲನಚಿತ್ರಗಳ ಜೊತೆಯಲ್ಲಿ ನಮ್ಮ ಕನ್ನಡ ಚಲನಚಿತ್ರಗಳು ಇರಬೇಕು. ನಮ್ಮ ನಾಡಿನಲ್ಲಿರತಕ್ಕಂತಹ ಜನತೆ ಉತ್ತಮವಾಗಿರತಕ್ಕಂತಹ ಚಲನಚಿತ್ರಗಳನ್ನು ಹಿಂದೆ ಕೂಡ, ಇವತ್ತು ಕೂಡ ನಿರ್ಮಾಣವನ್ನು ಮಾಡುತ್ತಿದ್ದಾರೆ ಇದರ ಬಗ್ಗೆ ಇಲ್ಲ ಎಂದು ಹೇಳುವುದಕ್ಕೆ ನಾನು ತಯಾರು ಇಲ್ಲ. ಕನ್ನಡ ಚಲನಚಿತ್ರದಲ್ಲಿ ಶ್ರೀ ಪುಟ್ಟಣ ಕಣಗಾಲ್‌ರವರ ನಿರ್ದೇಶನವನ್ನು ಮಾಡಿರತಕ್ಕಂತಹ ಹಲವಾರು ಉತ್ತಮ ಚಿತ್ರಗಳು, ಬಿ. ಆರ್. ಪಂತುಲುರವರು ನಿರ್ದೇಶನವನ್ನು ಮಾಡಿರತಕ್ಕಂಥದ್ದು, ಡಾ. ರಾಜಕುಮಾರ್‌ರವರು ಮಾಡಿರತಕ್ಕಂಥದ್ದು ಹಲವಾರು ಚಲನಚಿತ್ರಗಳು 100 ದಿವಸಗಳು ಕಾಲ 130 ದಿವಸಗಳ ಕಾಲ ನಡೆದಿದೆ. ಆದರೆ ಕೆಲವು ಚಲನಚಿತ್ರ ಮಂದಿರಗಳಲ್ಲಿ

ನಮ್ಮ ಕನ್ನಡದ ಚಲನಚಿತ್ರಗಳು ಒಂದು ವಾರ ಕೂಡ ನಡೆಯುವುದಿಲ್ಲ ಎಂದು ವಾರಗಳು ಕೂಡ ನಡೆಯದಂಥ ಪರಿಸ್ಥಿತಿಯು ಬಂದಿದೆ. ಆದುದರಿಂದ ಮಾನ್ಯ ಅಧ್ಯಕ್ಷರೆ ಇದನ್ನು ಕಾನೂನಿನ ಚೌಕಟ್ಟಿನ ಒಳಗಡೆ ನಾವು ನಿರ್ಬಂಧವನ್ನು ಹಾಕಿದರೆ, ಈ ಚಲನಚಿತ್ರಗಳನ್ನು ನೋಡುತ್ತಾ ಇರತಕ್ಕಂಥವರು ಯಾರು? ಕನ್ನಡ ನಾಡಿನ ಜನ. ಕೊನೆಗೂ ಕನ್ನಡ ನಾಡಿನ ಜನರು ನೋಡಬೇಕಾಗಿರತಕ್ಕಂತಹ ಪರಿಸ್ಥಿತಿಯು ಬಂದಿರತಕ್ಕಂತಹ ಹಿನ್ನೆಲೆಯಲ್ಲಿ ಮಾನ್ಯ ಸಭಾಪತಿಗಳೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರತಕ್ಕಂತಹ ವಿಚಾರ ಯಾವುದು ಇದೆ, ಬಹುಶಃ ಅದಕ್ಕೆ ಒಂದು ಸಲಹೆಯನ್ನು ನಾನು ಕೊಡುತ್ತೇನೆ. ಪುನಃ ಅವರುಗಳನ್ನು ಅಂದರೆ ಆ ಚಲನಚಿತ್ರದ ಉದ್ಯಮದಲ್ಲಿರತಕ್ಕಂತಹ ನಿರ್ದೇಶಕರು, ಪ್ರದರ್ಶಕರು ಮತ್ತು ನಿರ್ಮಾಪಕರುಗಳನ್ನು ಕರೆಸಿ ನಾನು ಸೇರಿ ಮತ್ತು ಚಲನಚಿತ್ರದ ಪ್ರಧಾನ ಕಾರ್ಯದರ್ಶಿಯವರನ್ನು ಸೇರಿ ಒಂದು ಸಭೆಯನ್ನು ಕರೆಯಬೇಕೆಂದು ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಇವತ್ತು ಅಥವಾ ನಾಳೆ ಆ ಸಭೆಯನ್ನು ಕರೆಯುತ್ತೇವೆ. ಈ ಮಧ್ಯೆ ಅವರುಗಳ ಒಳಗಡೆವೇ ಒಂದು ಅಭಿಪ್ರಾಯಕ್ಕೆ ಬಂದರೆ ತುಂಬಾ ಒಳ್ಳೆಯದು. ಸರ್ಕಾರದ ಮುಖಾಂತರ ಕಾನೂನನ್ನು ತರುವುದು, ನಿರ್ಬಂಧವನ್ನು ತರುವುದಕ್ಕಿಂತ, ಆ ಉದ್ಯಮ ನಡೆಸತಕ್ಕಂಥವರು ಒಟ್ಟಾರೆಯಾಗಿ ಸೇರಿ ಈ ಕೆಲಸವನ್ನು ಮಾಡಬೇಕು. ಈ ಹಿನ್ನೆಲೆಯಲ್ಲಿ ನಾನು ಒಂದು ಸಭೆಯನ್ನು ಕರೆದು ಪುನಃ ಅವರುಗಳ ಮನವನ್ನು ಒಲಿಸಿ ನಾವುಗಳೆಲ್ಲರೂ ಒಟ್ಟಾರೆ ಸೇರಿ ಕನ್ನಡದ ಈ ಚಲನಚಿತ್ರವನ್ನು ಎತ್ತರಕ್ಕೆ ತರುವುದಕ್ಕೆ ತಾವು ಸಹಕಾರಿಯಾಗಬೇಕು ಎಂದು ಹೇಳುತ್ತಾ ಅವರ ಜೊತೆಯಲ್ಲಿ ಪುನರಚರ್ಚೆಮಾಡಿ ಒಂದು ಕಾರ್ಯಕ್ರಮವನ್ನು ಕೈಗೊಳ್ಳುವುದಕ್ಕೆ ಒಂದು ಸಭೆಯನ್ನು ಕರೆಯುತ್ತೇನೆ. ಬಹುಶಃ ಅಂತಹ ಸಂದರ್ಭದಲ್ಲಿ ತಮ್ಮ ಸಹಕಾರವನ್ನು ಕೂಡ ನಾನು ಕೋರುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನನ್ನದು ಒಂದು ಪ್ರಶ್ನೆ ಏನೆಂದರೆ ಈಗ ಕನ್ನಡ ಚಲನಚಿತ್ರಗಳು ಪ್ರದರ್ಶನಕ್ಕೆ ಸಿಗುವುದಿಲ್ಲ ಎಂದು ಹೇಳತಕ್ಕಂಥದ್ದು ಇದು ಸರಿಯಾದ ಮಾತಲ್ಲ. ಚಿತ್ರಗಳು ಸಿಗುತ್ತವೆ, ಅದಕ್ಕೆ ಅನೇಕ ಕಾರಣಗಳು ಸಹಿತ ಇದೆ. ಕನ್ನಡ ಚಲನಚಿತ್ರಗಳು ಅನೇಕ ಇವೆ. ಕನ್ನಡ ಚಲನಚಿತ್ರದ ಬೆಳವಣಿಗೆಯನ್ನು ಮಾಡಬೇಕೆಂದು ಹೇಳಿ ಕನ್ನಡ ಚಲನಚಿತ್ರಗಳನ್ನು ತಯಾರು ಮಾಡಿದಂತಹವರಿಗೆ ಸರ್ಕಾರದಿಂದ ಸಹಾಯಧನವನ್ನು ಏನು ಕೊಡುತ್ತಿದ್ದೀರಿ ನೀವು ಮೂರು ವರ್ಷಗಳಿಂದ ಚಿತ್ರಗಳನ್ನು ತೆಗೆಯುವರಿಗೆ ಹಣವನ್ನೇ ಕೊಟ್ಟಿಲ್ಲವೆಂದು ಹೇಳಿದರೆ, ಚಿತ್ರವನ್ನು ಹೇಗೆ ತಯಾರು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇದುವರೆಗೆ ನಿಮ್ಮ ಸರ್ಕಾರ ಏಳುವರೆ ಕೋಟಿ ರೂಪಾಯಿಗಳನ್ನು ಚಿತ್ರವನ್ನು ತೆಗೆದವರ ಮೇಲೆ ಸಾಲವನ್ನು ಇಟ್ಟುಕೊಂಡಿರುತ್ತೀರಿ. ಅವರು ಬಂಡವಾಳಕ್ಕೆ ಸಾಲವನ್ನು ತಂದು ಬಡ್ಡಿಯನ್ನು ಕೊಟ್ಟು ಚಿತ್ರವನ್ನು ತೆಗೆದಂತವರ ಪರಿಸ್ಥಿತಿ ಏನು ? ಇದು ಒಂದು. ಇದನ್ನು ನಾವು ಗಮನಿಸಬೇಕು, ನಾನು ಅನೇಕ ಸಾರಿ ಇದರ ಬಗ್ಗೆ ಹೇಳಿದ್ದೇನೆ. ನೀವು ಒಂದು ಚಿತ್ರಗಳು ಬರುವುದಿಲ್ಲವೆಂದು ಹೇಳಿದ್ದೀರಿ ಮತ್ತೊಂದು ಕಡೆ ಚಿತ್ರವನ್ನು ತೆಗೆದಿರತಕ್ಕಂತಹ ಸಹಾಯಧನವನ್ನು ಕೊಡದೆ ಅವರ ಪರಿಸ್ಥಿತಿಯನ್ನು ನೆಟ್ಟಗೆ ಮಾಡಿದ್ದೀರಿ. ಇದು ಸರಿಯಾದುದು ಅಲ್ಲ. ಮತ್ತೊಂದು ವಿಚಾರ ತಮ್ಮ ಗಮನಕ್ಕೆ ಬರಬೇಕಾದುದು ಬೇರೆ ರಾಜ್ಯದಲ್ಲಿ ಎಲ್ಲಿಯೂ ನಮ್ಮ ಕನ್ನಡ ಚಲನಚಿತ್ರಗಳು ನಡೆಯುತ್ತಿಲ್ಲ.

ಶ್ರೀ ಎಂ.ಪಿ. ನಾಣಯ್ಯ : ಮಾನ್ಯ ಅಧ್ಯಕ್ಷರೆ, ನಮ್ಮ ಕನ್ನಡ ಚಿತ್ರಗಳು ಚೆನ್ನಾಗಿ ನಡೆಯುವುದಿಲ್ಲ ಏಕೆ? ಈ ಹಿಂದೆ ನಾವೇ ನಿರ್ಮಾಣ ಮಾಡಿರುವಂತಹ ಹಲವಾರು ಬಹಳ ಪ್ರಮುಖವಾಗಿರತಕ್ಕಂತಹ ಬಹಳ ವಿಶೇಷವಾಗಿರತಕ್ಕಂತಹ ಕನ್ನಡ ಚಿತ್ರಗಳನ್ನು ಹಿಂದಿ ಭಾಷೆಗೆ ಡಬ್ ಮಾಡಿದ್ದಾರೆ. ತಮಿಳು ಭಾಷೆಗೆ ಡಬ್ ಮಾಡಿದ್ದಾರೆ ಇಲ್ಲ ಎಂದು ಹೇಳುವುದಕ್ಕೆ ನಾವು ತಯಾರಿಲ್ಲ. ಏಕೆ?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಕನ್ನಡದಲ್ಲಿ ಉತ್ತಮವಾಗಿ ಬಂದಂತಹ ಚಿತ್ರಗಳನ್ನು ಬೇರೆ ಭಾಷೆಗೆ ಡಬ್ ಮಾಡತಕ್ಕಂತಹ ವಿಚಾರ ಬೇರೆ. ಅದರ ಬಗ್ಗೆ ಒಂದೇ ಅಲ್ಲ, ಎಲ್ಲಾ ಭಾಷೆಗಳಲ್ಲಿಯೂ ಡಬ್ ಮಾಡಿರತಕ್ಕಂಥದ್ದು ಉಂಟು. ಆದರೆ ಬೇರೆ ರಾಜ್ಯದಲ್ಲಿ ಕನ್ನಡ ಚಲನಚಿತ್ರ ಪ್ರದರ್ಶನ ಇಲ್ಲವೇ ಇಲ್ಲ ಅದಕ್ಕೆ ಬೇರೆ ರಾಜ್ಯದ ಸರ್ಕಾರಗಳಿಗೆ ನಿಮ್ಮ ಸರ್ಕಾರ ಇದರ ಬಗ್ಗೆ ಏನಾದರೂ ಒಂದು ಹೇಳಬೇಕಲ್ಲ. ನಿಮ್ಮ ರಾಜ್ಯದ ಭಾಷೆಯ ಚಲನಚಿತ್ರಗಳು ನಮ್ಮ ರಾಜ್ಯದಲ್ಲಿ ಎದ್ದತದ್ದ ನಡೆಯುತ್ತಿವೆ. ನಿಮ್ಮಲ್ಲಿ ಕನ್ನಡ ಚಿತ್ರಗಳನ್ನು ನಡೆಸತಕ್ಕಂತಹ ಸೌಜನ್ಯವಾದರೂ....

ಶ್ರೀ ಜೆ.ಹೆಚ್. ಪಟೇಲ್ (ಉಪಮುಖ್ಯಮಂತ್ರಿಗಳು) : ಪೂನಾದಲ್ಲಿರತಕ್ಕಂತಹ ಕನ್ನಡಿಗರು ಮರಾಠಿ ಭಾಷೆಯನ್ನು ಕಲಿತೇ ಕಲಿಯುತ್ತಾರೆ. ಮದ್ರಾಸಿನಲ್ಲಿರತಕ್ಕಂತಹ ಕನ್ನಡಿಗರು ತಮಿಳನ್ನು ಕಲಿತೆ ಕಲಿಯುತ್ತಾರೆ. ಹೈದರಾಬಾದ್‌ನಲ್ಲಿರತಕ್ಕಂತಹ ಕನ್ನಡಿಗರು ತೆಲುಗನ್ನು ಮಾತನಾಡೇ ಮಾತನಾಡುತ್ತಾರೆ. ನಮ್ಮ ಹೊರ ರಾಜ್ಯದಲ್ಲಿರತಕ್ಕಂತಹ ಕನ್ನಡಿಗರು ಆ ರಾಜ್ಯದ ಭಾಷೆಯನ್ನು ಕಲಿತೇ ಕಲಿಯುತ್ತಾರೆ. ಅವರುಗಳು ನಮ್ಮ ಭಾಷೆಯ ಚಿತ್ರಗಳು ಬೇಕೆ ಎಂದು ಹೇಳುವುದಿಲ್ಲ ಮತ್ತು ಅಲ್ಲಿರತ್ಕಂತಹ ಭಾಷೆಯನ್ನು ಕಲಿತೇ ಕಲಿಯುತ್ತಾರೆ. ಆದರೆ ಬೆಂಗಳೂರಿನಲ್ಲಿರತಕ್ಕಂತಹ ಹೊರರಾಜ್ಯದವರು 50 ವರ್ಷಗಳ ಕಾಲ ಬೆಂಗಳೂರಿನಲ್ಲಿದ್ದರೂ ಕನ್ನಡವನ್ನು ಕಲಿಯಬೇಕು ಎಂದು ಏನೂ ಇಲ್ಲ. ಅದು ನಮ್ಮ ನಾಡಿನ ಜನರ ವೀಕ್‌ನೆಸ್. ನನ್ನ ಭಾಷೆಯನ್ನು ಕಲಿತರೆ ಮಾತ್ರ ಸಾಧ್ಯ ಇಲ್ಲ ಎಂದರೆ ಸಾಧ್ಯವಿಲ್ಲ ಎನ್ನಬೇಕು. ಸರ್ಕಾರ ಅದನ್ನು ಕಂಪೆಲ್ ಮಾಡಬೇಕು; ಇಲ್ಲ ಎಂದರೆ ಅವರನ್ನು ಓಡಿಸಬೇಕು ಎಂದು ಏನಲ್ಲ. ಆ ರೀತಿಯ ಭಾಷೆಯ ಒತ್ತಡ ನಮ್ಮ ರಾಜ್ಯದಲ್ಲಿ ಇಲ್ಲ. ಇದನ್ನು ಬಹಳ ಸಾರಿ ನಾವು ಹೇಳುತ್ತಿದ್ದೇವೆ. ಕನ್ನಡ ಬೆಳೆಯಬೇಕು, ಕನ್ನಡ ಬೆಳೆಯಬೇಕು ಎಂದರೆ ಹೇಗೆ ಬೆಳೆಯುತ್ತದೆ. ಹೊರರಾಜ್ಯದವನು 50 ವರ್ಷಗಳಿಂದ ಬೆಂಗಳೂರಿನಲ್ಲಿ ಇದ್ದರೂ ಅವನಿಗೆ ಕನ್ನಡವೇ ಬರುವುದಿಲ್ಲ. ಅವನ ಭಾಷೆಯನ್ನು ಕಲಿತುಕೊಳ್ಳುವುದಕ್ಕೆ ನಮ್ಮವರು ತಯಾರು ಆಗುತ್ತಾರೆಯೇ ಹೊರತು, ನಮಗೆ ಆ ಭಾಷೆಯ ಅಭಿಮಾನ ಜನರಿಂದ ಬರಬೇಕು. ಇದನ್ನೆಲ್ಲ ಸರ್ಕಾರ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ, ಎಲ್ಲಿಯೂ ಯಾವ ದೇಶದಲ್ಲಿಯೂ ಜನಶಕ್ತಿಯಿಂದ, ಜನರ ಒತ್ತಡದಿಂದ ಭಾಷೆಯು ಬೆಳೆಯಬೇಕೆ ಹೊರತು ಸರ್ಕಾರಗಳಿಂದಲ್ಲ.

1.00 ಪಿ.ಎಂ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಏನು ಹೇಳಿದಿರಿ, ಇಲ್ಲಿಗೆ ಬರುತ್ತಿರುವಂಥ ಎಲ್ಲಾ ಭಾಷೆಯ ಜನರಿಗೂ ನಮ್ಮ ಸಹಕಾರವನ್ನು ಕೊಡುತ್ತಿದ್ದೇವೆ. ಆದರೆ ಇಲ್ಲಿಗೆ ಬಂದಂಥ ಜನರು ತಮ್ಮ ಭಾಷೆಯ ಜೊತೆಗೆ ಕನ್ನಡವನ್ನೂ ಕಲಿಯದಿದ್ದರೆ, ಕನ್ನಡಕ್ಕೆ ನಾವು ಪ್ರಾಧಾನ್ಯತೆ, ಅದಕ್ಕೆ ಕೊಡಬೇಕಾದ

ಅಧ್ಯತೆಯನ್ನು ಕೊಡದಿದ್ದರೆ ನಾವು ಇಲ್ಲಿ ಬದುಕುವುದಕ್ಕೆ ಸಾಧ್ಯವೇ ಇಲ್ಲ ಎನ್ನುವಂಥ ಒಂದು ವಾತಾವರಣವನ್ನು ನಿರ್ಮಾಣ ಮಾಡತಕ್ಕ ಕರ್ತವ್ಯ ಸರ್ಕಾರದೂ ಇದೆ, ಮತ್ತು ಜನರದ್ದೂ ಇದೆ. ಇಲ್ಲಿ ಎಲ್ಲರಿಗೂ ಸ್ವಾಗತ ಹಾಗಾದರೆ ಇಲ್ಲಿ ಕರ್ನಾಟಕದಲ್ಲಿ ಕನ್ನಡ ಚಿತ್ರಗಳಿಗೆ ಹೆಚ್ಚಿನ ಆದ್ಯತೆ ಎನ್ನತಕ್ಕ ಅವರ ಡಿಮ್ಯಾಂಡ್ ಏನಿದೆ ಅದನ್ನು ಫುಲ್‌ಫಿಲ್ ಮಾಡಿ. ಅವರು ಕಂಪಲ್ಸರಿಯಾಗಿ ನೋಡಬೇಕಾಗುತ್ತದೆ. ಕನ್ನಡ ಚಿತ್ರಗಳಿನ್ನೂ ಅವರೂ ತೆಗೆಯ ಬೇಕಾಗುತ್ತದೆ. ಜನರು ನಮಗೆ ಬುದ್ಧಿಯನ್ನು ಕಲಿಸುತ್ತಾರೆಂಬ ಭೀತಿ ಬರುತ್ತದೆ. ಎಲ್ಲಾದರೂ ಒಂದು ಹಂತದಲ್ಲಿ ಸರ್ಕಾರ ಒಂದು ಬಿಗಿ ನಿಲುವನ್ನು ತೆಗೆದುಕೊಳ್ಳಬೇಕಲ್ಲ! ಇಲ್ಲಿಗೆ ಬಂದವರು ಯಾರು ಬೇಕಾದರೂ ಧಾರಾಳವಾಗಿ ಬದುಕಬಹುದು, ಎನ್ನತಕ್ಕ ಧಾರಾಳತನವನ್ನು ಸರ್ಕಾರದವರು ತೋರಿಸುತ್ತಿದ್ದೀರಿ; ನಿಮ್ಮ ಕಳಕಳಿ ಸರಿ ಇರಬಹುದು; ಆದರೆ ಇದನ್ನು ಮಾಡುವವರು ಯಾರು? ಆ ರೀತಿ ಮಾಡುವಂಥ ವಾತಾವರಣವನ್ನು ಉಂಟುಮಾಡಿ ಎಂದು ನಾವು ಹೇಳುತ್ತಿರುವುದು.

ಶ್ರೀ ಜೆ.ಹೆಚ್. ಪಟೇಲ್ : ಎಲ್ಲರೂ ಕನ್ನಡ ಚಿತ್ರಗಳನ್ನೇ ನೋಡಬೇಕೆಂದು ಸರ್ಕಾರದವರು ಕಾನೂನು ಮಾಡುವುದಕ್ಕೆ ಆಗುತ್ತದೆಯೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಬೇಡ. ಪರ ಭಾಷಾ ಚಿತ್ರಗಳು ಇಲ್ಲಿ ಕೆಲವು ತಿಂಗಳು ನಡೆಯಕೂಡದು. ಈಗ ಇವರ ಡಿಮ್ಯಾಂಡ್ ಏನಿದೆ ಇದನ್ನು ಮೊದಲು ಫುಲ್‌ಫಿಲ್ ಮಾಡಿ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೆ, ನಾನು ಹೇಳುತ್ತಿರುವುದು ಕನ್ನಡ ಭಾಷೆಯ ಚಿತ್ರಗಳನ್ನೇ ನೀನು ನೋಡಬೇಕೆಂದು ಹೇಳಿದರೆ, ನಾನು ನೋಡುವುದಿಲ್ಲ ಎಂದು ಹೇಳುತ್ತೇನೆ, ಥಿಯೇಟರನ್ನೂ ಮುಚ್ಚಿಕೊಳ್ಳುತ್ತಾನೆ. ಅಲ್ಲಿ ಕಸ ಹೊಡೆಯುವವನು ಎಲ್ಲೋ ಹೋಗುತ್ತಾನೆ. ಇವತ್ತು ತಮಗೆ ಹೇಳುವುದಾದರೆ, ನಮ್ಮ ಬೆಂಗಳೂರಿನಲ್ಲಿ ಬೇರೆ ಭಾಷೆಗಳ ಚಿತ್ರಗಳು ಓಡಿದಷ್ಟು ನಮ್ಮ ಕನ್ನಡ ಭಾಷೆಯ ಚಿತ್ರಗಳು ಓಡುವುದಿಲ್ಲ. ಇವು ಜನರ ಡುಡ್ಡಿನಿಂದ ಬದುಕಬೇಕು. ಸರ್ಕಾರದ ದುಡ್ಡಿನಿಂದ ಅಲ್ಲ. ನಾವು ಎಷ್ಟೇ ಪ್ರಯತ್ನ ಮಾಡಿ ನಮ್ಮ ಕನ್ನಡ ಭಾಷೆಯನ್ನು ಬೆಳೆಸಬೇಕು, ಒಳ್ಳೆಯ ಚಿತ್ರಗಳನ್ನು ತೆಗೆಯಬೇಕು, ನಿಮಗೆ ಸಬ್ಸಿಡಿಯನ್ನು ಕೊಡುತ್ತೇವೆ, ಟ್ಯಾಕ್ಸ್ ರಿಲೀಫ್ ಕೊಡುತ್ತೇವೆ, ಇತ್ಯಾದಿ ಏನು ಹೇಳಿದರೂ ಸಾಧ್ಯವಾಗುತ್ತಿಲ್ಲ. ಆದರೆ ನಮ್ಮಲ್ಲಿ ಅನೇಕ ಒಳ್ಳೆಯ ಕನ್ನಡ ಚಿತ್ರಗಳು ಬಂದಿವೆ. ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಪ್ರಶಸ್ತಿಯನ್ನು ತೆಗೆದುಕೊಂಡಿರುವಂಥ ಕನ್ನಡ ಚಿತ್ರಗಳು ಬಂದಿದ್ದರೂ ಅವುಗಳನ್ನು ಜನರು ನೋಡುವುದಿಲ್ಲ. ಜನರು ನೋಡುವುದಾದರೂ ಎಂಥಾದ್ದು, ತಮಿಳು, ಮುಂತಾದ ಚಿತ್ರಗಳನ್ನು. ಅವರು ಏತಕ್ಕೆ ನೋಡುತ್ತಾರೆಂಬುದೂ ತಮಗೆ ಗೊತ್ತಿದೆ. ಆ ತಮಿಳು ರೀತಿಯಲ್ಲಿ ಕುಣಿಯುವುದಕ್ಕೆ ನಮ್ಮವರಿಗೆ ಬರುವುದಿಲ್ಲ. ಹಾಗಾದರೆ ನೀವು ಕುಣಿಯುವುದನ್ನು ಕಲಿಸಿ. ಅವರಂತೆಯೇ ನೀವೂ ಮಾಡಿಸಿ, ಸರ್ಕಾರವೇ ಒಂದು ಶಾಲೆಯನ್ನು ಮಾಡಿಸಿ ಎಂದು ಹೇಳಿದರೆ ಅದೆಲ್ಲಾ ಸಾಧ್ಯವಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಎಲ್ಲ ಭಾಷೆಯವರಂತೆ ಕುಣಿಯುವುದೂ ಗೊತ್ತಿದೆ. ಆದರೆ ಪ್ರಶ್ನೆ ಅದಲ್ಲ. ಆದರೆ ಇದರ ಬಗ್ಗೆ ವಾದ ಮಾಡುವುದು ಬೇಡ. ಒಳ್ಳೆಯ ವಾತಾವರಣವನ್ನು ನೀವು ಸೃಷ್ಟಿ ಮಾಡಬೇಕು. ತಮಿಳರು ಚೆನ್ನಾಗಿ ಕುಣಿಯುತ್ತಾರೆ, ತೆಲುಗರು ಚೆನ್ನಾಗಿ ಕುಣಿಯುತ್ತಾರೆ, ಮರಾಠಿಗಳು

ಚೆನ್ನಾಗಿ ಕುಣಿಯುತ್ತಾರೆಂದು ಹೇಳುವುದು ಬೇಡ. ಹಾಗಾದರೆ ನಮ್ಮವರು ತಲೆಕೆಳಗಾಗಿ ಕುಣಿಯುತ್ತಾರೆಯೆ? ಅವರೆಲ್ಲರನ್ನೂ ಮೀರಿಸುವಂತೆ ಕುಣಿಯುವ ಕಲಾವಿದರು ನಮ್ಮಲ್ಲಿದ್ದಾರೆ. ತಮಿಳು, ತೆಲುಗು, ಮಲಯಾಳಿ ಮುಂತಾದ ಎಲ್ಲ ಕಲಾವಿದರನ್ನೂ ಮೀರಿಸುವಂಥ ಕಲಾವಿದರು ನಮ್ಮಲ್ಲಿದ್ದಾರೆ. ತಾವೇ ಹೇಳುತ್ತಿದ್ದೀರಿ, ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಶಸ್ತಿ ಪಡೆದಂಥ ಚಿತ್ರಗಳನ್ನು ನೋಡಿದ್ದೇವೆಂದು ಹೇಳುತ್ತಿದ್ದೀರಿ. ಇನ್ನೊಂದು ಕಡೆ ಹೇಳುತ್ತೀರಿ ತಮಿಳರು ಕುಣಿದಂತೆ ನಮ್ಮವರು ಕುಣಿಯುವುದಿಲ್ಲ ಎಂದು.

ಶ್ರೀ ಜೆ.ಹೆಚ್. ಪಟೇಲ್ : ಅಂಥ ಉತ್ತಮ ಚಿತ್ರಗಳನ್ನು ನಮ್ಮ ಜನರು ನೋಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪ ಮುಖ್ಯ ಮಂತ್ರಿಗಳಲ್ಲಿ ನಾನು ಮನವಿ ಮಾಡುತ್ತೇನೆ, ಅಂಥ ವಾತಾವರಣವನ್ನು ತಾವು ನಿರ್ಮಾಣಮಾಡಿ.

ಶ್ರೀ ಜೆ.ಹೆಚ್. ಪಟೇಲ್ : ನಾನೇ ಬಹಳ ಉತ್ತಮವಾದ ಎರಡು ಸಿನಿಮಾಗಳನ್ನು ತೆಗೆದೆ. ಅದನ್ನು ಜನರು ನೋಡಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾನು ಉತ್ತಮವಾದ 2 ಚಿತ್ರಗಳನ್ನು ತೆಗೆದೆ ಎಂದು ನೀವು ಹೇಳಿಕೊಳ್ಳಬಹುದು, ಅದು ನಿಮ್ಮ ದೃಷ್ಟಿಯಲ್ಲಿ ಉತ್ತಮ ಇರಬಹುದು.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದ್ದುದು ಬೇರೆಯವರಂತೆ ಅಶ್ಲೀಲವಾಗಿ ಕುಣಿತ, ಹಿಂಸೆ ಇಂಥಾದ್ದನ್ನೆಲ್ಲಾ ನಮ್ಮ ಕನ್ನಡ ಚಿತ್ರಗಳಲ್ಲಿ ತೋರಿಸುವುದಿಲ್ಲ, ಅಶ್ಲೀಲತೆಗೆ ಮತ್ತು ಸದಭಿರುಚಿಯಲ್ಲದಂಥ ಸಿನಿಮಾಗಳನ್ನು ಜನರು ನೋಡುತ್ತಾರೆಂಬ ಹಿನ್ನೆಲೆಯಲ್ಲಿ ಅವರು ಮಾತನಾಡಿದರೇ ವಿನಃ ಬೇರೆ ಅಲ್ಲ. ಅವರಂತೆ ನಮಗೆ ಕುಣಿಯುವುದಕ್ಕೆ ಬರುವುದಿಲ್ಲ ಎಂದರೆ ಅಶ್ಲೀಲವಾದುದನ್ನು ನಮ್ಮ ಚಿತ್ರಗಳಲ್ಲಿ ತೋರಿಸುವುದಿಲ್ಲ. ಬಹಳ ಸಂಪ್ರದಾಯಬದ್ಧವಾದ, ನೋಡುವ ರೀತಿಯಲ್ಲಿರುವಂಥ ಮತ್ತು ಮೌಲ್ಯಗಳನ್ನು ಆದಷ್ಟು ಮಟ್ಟಿಗೆ ಎತ್ತಿ ಹಿಡಿಯಬೇಕೆಂಬ ನಿರ್ಮಾಪಕರು ಕನ್ನಡದಲ್ಲಿ ಇರುವುದರಿಂದ ಬೇರೆಯವರಷ್ಟು ಅಶ್ಲೀಲವಾದ ಚಿತ್ರಗಳನ್ನು ತೆಗೆಯುವುದಿಲ್ಲ. ಅಭಿರುಚಿಯ ವಾತಾವರಣವನ್ನು ಬದಲಾವಣೆ ಮಾಡಬೇಕಾಗುತ್ತದೆ; ಮತ್ತು ಇಲ್ಲಿರತಕ್ಕ ವಾತಾವರಣದಲ್ಲಿ ನಿರಭಿಮಾನಿಗಳಾಗಿರತಕ್ಕ ಜನ ಸಮೂಹದ ನಡುವೆ ನಾವು ಒಂದು ಒಳ್ಳೆಯ ಚಿತ್ರವನ್ನು ತಯಾರಿಸತಕ್ಕದ್ದು, ಸೃಜನಾತ್ಮಕ ಚಿತ್ರವನ್ನು ತಯಾರಿಸುವುದು ಬಹಳ ಜವಾಬ್ದಾರಿಯುತವಾಗಿದೆ ಎನ್ನತಕ್ಕ ಮಾತನ್ನು ಅವರು ಹೇಳಿದರೇ ವಿನಃ ನಮ್ಮವರಿಗೆ ಕುಣಿಯುವುದಕ್ಕೆ ಬರುವುದಿಲ್ಲ ಎನ್ನತಕ್ಕ ಮಾತನ್ನು ಅವರು ಹೇಳಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಹಾಗಾದರೆ ನಿಮ್ಮ ದೃಷ್ಟಿಯಲ್ಲಿ ಅಶ್ಲೀಲವಾದ ಚಿತ್ರಗಳನ್ನು ನೋಡತಕ್ಕವರು ನಮ್ಮ ಕರ್ನಾಟಕದ ಜನರು ಎಂಬುದು ನಿಮ್ಮ ಅಭಿಪ್ರಾಯವೆ? ಇದು ನಿಮ್ಮ ತೀರ್ಮಾನವೆ? ಹಾಗಾದರೆ ಅಶ್ಲೀಲ ಚಿತ್ರಗಳನ್ನು ನೋಡುವವರು ಒಂದು ಭಾಗ, ಇನ್ನೊಂದು ಭಾಗ ಒಳ್ಳೆಯ ಚಿತ್ರಗಳನ್ನು ನೋಡುವವರು ಎಂದು ಎರಡು ಭಾಗವಾಗಿದ್ದಾರೆಂಬುದು ನಿಮ್ಮ ಅಭಿಪ್ರಾಯ. ನೀವು ಈ ರೀತಿ ಮಾತನಾಡುತ್ತಿರುವುದು ನನಗೆ ಅರ್ಥವಾಗುತ್ತಿಲ್ಲ. ಹಾಗಾದರೆ ನಮ್ಮ ಕರ್ನಾಟಕದಲ್ಲಿ ಬೇರೆ ಭಾಷೆಯ ಚಿತ್ರಗಳನ್ನೂ ನೋಡುವವರೆಲ್ಲಾ ಅಶ್ಲೀಲವಾದವರು, ಎನ್ನತಕ್ಕ ಭಾವನೆಯೆ?

ಶ್ರೀ ಎಂ.ಪಿ. ಪ್ರಕಾಶ್ : ಅಶ್ಲೀಲವಾದುದು ಎಂದರೆ, ಸದಭಿರುಚಿಯನ್ನು ಬೆಳಸದೇ ಹೋದಂಥ ಸಂದರ್ಭದಲ್ಲಿ ಹಿಂಸೆಗೆ, ಅಶ್ಲೀಲತೆಗೆ ಹೆಚ್ಚು ಪ್ರಾಧಾನ್ಯತೆ ಇರತಕ್ಕದ್ದು ಇದ್ದರೆ ಚಿಕ್ಕವಯಸ್ಸಿನ ಮಕ್ಕಳು ಇವುಗಳನ್ನು ನೋಡುವ ಸಂದರ್ಭಗಳು ಹೆಚ್ಚು ಇವೆ. ನಮ್ಮವರು ಕನ್ನಡ ಚಿತ್ರಗಳನ್ನು ಹೆಚ್ಚು ಜವಾಬ್ದಾರಿಯಿಂದ ತೆಗೆಯುತ್ತಿರುವುದರಿಂದ ನಮ್ಮ ಕನ್ನಡಿಗರೆಲ್ಲಾ ಅವುಗಳನ್ನು ನೋಡುತ್ತಾರೆಂಬ ಅರ್ಥವಲ್ಲ. ಇವತ್ತು ನಮ್ಮ ಬೆಂಗಳೂರಿನಲ್ಲಿ ಕನ್ನಡೇತರ ಜನಸಂಖ್ಯೆಯೇ ಬಹಳವಾಗಿದೆ. ಥಿಯೇಟರುಗಳವರಲ್ಲ ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡೇತರರೇ ಆಗಿದ್ದಾರೆ. ಕನ್ನಡೇತರ ಕೈಯಲ್ಲೇ ಈ ಚಿತ್ರಗಳ ಹಂಚಿಕೆ ವ್ಯವಸ್ಥೆ ಇದೆ. ಇಂಥ ವ್ಯವಸ್ಥೆಯ ನಡುವೆ ನಮ್ಮ ಉದ್ದಿಮೆ ಬೆಳೆಯಬೇಕಾದರೆ ಅದಕ್ಕೆ ಬೇಕಾದಂಥ ಸೌಲತ್ತನ್ನು ನಮ್ಮ ಸರ್ಕಾರದಿಂದ ಕೊಟ್ಟರೂ ಕೂಡ ಕನ್ನಡಿಗರೂ ಕೂಡ ನಿರಭಿಮಾನಿಗಳಾಗದಂತೆ ಮತ್ತು ಗುಣಾತ್ಮಕವಾದ ಚಿತ್ರಗಳನ್ನು ತೆಗೆಯುವುದರ ಮೂಲಕ ನಮ್ಮ ನೋಡುಗರು ಮೆಚ್ಚುವಂತಾಗಬೇಕು. ಉದಾಹರಣೆಗೆ ಹೇಳುವುದಾದರೆ, ನಮ್ಮಕಿರುತೆರೆಯ ಚಿತ್ರಗಳ ವಿಚಾರದಲ್ಲೂ ತಾವು ಹೇಳಬಹುದು; ನಮ್ಮಲ್ಲಿ ಗುಣಾತ್ಮಕವಾದ ಚಿತ್ರಗಳು ಬರುತ್ತಿಲ್ಲ. ಆದರೆ ಪರಭಾಷೆಯ ಜನರ ಹಿಡಿತ ಹೆಚ್ಚಿನ ರೀತಿಯಲ್ಲಿ ಅದರ ಮೇಲಿರುವುದರಿಂದ ತಮ್ಮ ಕಳಕಳಿ ಏನಿದೆ ಅದನ್ನು ಸಂಪೂರ್ಣವಾಗಿ ನಾವು ಒಪ್ಪಬೇಕಾಗುತ್ತದೆ. ಕನ್ನಡ ಚಿತ್ರಗಳನ್ನು ಕಡ್ಡಾಯವಾಗಿ ನೋಡಿ ಎಂದು ನಾವು ಹೇಳಬಹುದೇ ವಿನಃ ಅದಕ್ಕಾಗಿ ಒಂದು ಕಾನೂನನ್ನೇ ಮಾಡಿ ಬಲಾತ್ಕರಿಸುವುದು ಕಷ್ಟಸಾಧ್ಯ.

ಶ್ರೀ ವಾಟಾಳ್ ನಾಗರಾಜ್ : ಇಲ್ಲಿ ಒಂದು ಮಾತು ಹೇಳುವುದಾದರೆ, ಈ ಕನ್ನಡ ಚಿತ್ರೋದ್ಯಮಕ್ಕೆ ಕಂಟಕಪ್ರಾಯವಾಗಿರತಕ್ಕವರು ಎಂದರೆ ಹಂಚಿಕೆದಾರರು ಮತ್ತು ಚಿತ್ರಮಂದಿರದವರು. ಮಾನ್ಯ ಪಟೇಲರಿಗೆ ಹೇಳುವುದಾದರೆ, ಬನ್ನಿ ಆಮೇಲೆ ಮಾತನಾಡೋಣ. ಯಾರು ಹೋಗಿ ಅವುಗಳನ್ನು ನೋಡಲಿಲ್ಲ ಎಂದು ಹೇಳುವುದಾದರೆ ಅದಕ್ಕೆ ಕಾರಣಗಳು ಬೇರೆ ಇರಬಹುದು. ನೀವು ಚಿತ್ರವನ್ನು ಯಾವ ತರಹದ್ದು ತೆಗೆದಿದ್ದೀರೋ, ಏನು ತೆಗೆದಿದ್ದಿರೋ, ನಿಮ್ಮ ಚಿತ್ರಗಳು ಯಾವ ಮಟ್ಟದವು ಇದ್ದುವು, ಅದನ್ನು ಜನರು ನೋಡುವ ಮಟ್ಟದಲ್ಲಿದ್ದುವೋ, ಅದರಲ್ಲಿ ಕುಣಿತ ಇತ್ತೇ, ಲೈಟ್ ಇತ್ತೇ, ಇಲ್ಲವೆ, ಸಂಗೀತ ಇತ್ತೆ ಅಥವಾ ಇರಲಿಲ್ಲವೇ ಎನ್ನತಕ್ಕ ವಿಚಾರಗಳು ಬೇರೆ. ಇಲ್ಲಿ ಅದು ಪ್ರಶ್ನೆಯಲ್ಲ.

ಶ್ರೀ ಜೆ.ಹೆಚ್. ಪಟೇಲ್ : ನೀವು ಇಲ್ಲಿ ಕಲೆಯ ಬಗ್ಗೆ ಮಾತನಾಡುವಾಗ ಭಾಷೆಯ ಅಭಿಮಾನದಲ್ಲಿ ನಿಮಗಿಂತ ಕಡಿಮೆ ಇರುವವರು ಇಲ್ಲಿ ಯಾರೂ ಇಲ್ಲ. ನಾನು ಹೇಳಿದ್ದು ಬೇರೆ. ಕನ್ನಡ ಭಾಷೆಯ ಬೆಳವಣಿಗೆಗೆ ಪೂರಕವಾಗಿ ನಮ್ಮ ಸರ್ಕಾರದ ವತಿಯಿಂದ ಏನು ಮಾಡಬಹುದು, ಎಷ್ಟು ದೂರದವರೆಗೆ ಹೋಗಬಹುದು, ಕಲೆ ಹೇಗೆ ಬೆಳೆಯುತ್ತದೆ, ಚಿತ್ರ ಹೇಗೆ ಆಗುತ್ತದೆ ಎಂಬುದನ್ನು ನಾನು ಹೇಳಿದರೇ ಹೊರತು ಬೇರೆ ಹೇಳಲಿಲ್ಲ. ನಾನು 'ಅವಸ್ಥೆ' ಎಂದು ಒಂದು ಸಿನಿಮಾವನ್ನು ತೆಗೆದಿದ್ದೆ ಅದನ್ನು ನೀವು ಹೋಗಿ ನೋಡಿದ್ದಿರಾ?

ಶ್ರೀ ವಾಟಾಳ್ ನಾಗರಾಜ್ : ನಿಮ್ಮನ್ನು ನೋಡಿ 'ಅವಸ್ಥೆ' ಎಂದು ಒಂದು ಸಿನಿಮಾವನ್ನು ನಾನೂ ತೆಗೆಯಬೇಕೆಂದಿದ್ದೆ.

ಶ್ರೀ ಜೆ.ಹೆಚ್. ಪಟೇಲ್ : ನೀವು ಮೊದಲು ಅವ್ಯವಸ್ಥೆ ಆಗಿದ್ದುದನ್ನು ನೋಡಿಯೇ ನಾನು ಅದನ್ನು ತೆಗೆದಿದ್ದು.

ಶ್ರೀ ವಾಟಾಳ್ ನಾಗರಾಜ್ : ನನ್ನದು ಬಿಡುಗಡೆ ಆಗಲಿಲ್ಲ. ನಿಮ್ಮ ಅವ್ಯವಸ್ಥೆಯ 'ಅವಸ್ಥೆ' ಬಿಡುಗಡೆ ಆಯಿತು.

ಶ್ರೀ ಜೆ. ಹೆಚ್. ಪಟೇಲ್ : ನೀವು ಹೋಗಿ ನೋಡಿದ್ದೀರೋ?

ಶ್ರೀ ವಾಟಾಳ್ ನಾಗರಾಜ್ : ನಾನು ಹೋಗಿ ನೋಡಲಿಲ್ಲ. ನೀವು ಏತಕ್ಕೆ ನಿಮ್ಮ ಕೈಯನ್ನು ಹಾಗೆ, ಹೀಗೆ ಮಾಡುತ್ತೀರಿ. ನಿಮ್ಮ ಧೋರಣೆ ಸರಿಯಲ್ಲ. ನಾನು ಕೇಳಿದ ಪ್ರಶ್ನೆಗೆ ನೀವು ಸಮಂಜಸವಾಗಿ ಉತ್ತರವನ್ನು ಕೊಡಿ. ಇಲ್ಲದೇ ಹೋದರೆ ಬಿಡಿ. ಇವತ್ತು ನಮ್ಮಲ್ಲಿ ಕನ್ನಡ ಚಿತ್ರರಂಗಕ್ಕೆ ಅಪಾಯವಾಗಿರತಕ್ಕದ್ದು ಪರಭಾಷಾ ಚಿತ್ರಗಳ ಧಾಳಿಯಿಂದ ಅದನ್ನು ನಿಲ್ಲಿಸುವುದಕ್ಕೆ ಏನು ಬೇಕೋ ಅದನ್ನು ಸರ್ಕಾರದಿಂದ ಹೇಳಿ. ಕತೆಯನ್ನು ಹೇಳುವುದಕ್ಕೆ ಹೋಗಬೇಡಿ. ಅವರು ಕುಣಿಯುವುದಕ್ಕೆ ಆಗುವುದಿಲ್ಲ, ಇವರು ನೆಗೆಯುವುದಕ್ಕೆ ಆಗುವುದಿಲ್ಲ ಎಂದು ಹೇಳಿದರೆ ಇದರಿಂದ ನಮಗೆ ತೃಪ್ತಿಯಾಗುವುದಿಲ್ಲ. ಚಿತ್ರಮಂದಿರಗಳ ಮೇಲೆ ನಿಮ್ಮ ಹಿಡಿತವನ್ನು ಇಟ್ಟುಕೊಳ್ಳುವುದಕ್ಕೆ ಏನು ಮಾಡುತ್ತೀರೋ ಹೇಳಿ. ವರ್ಷದಲ್ಲಿ ಇಂತಿಷ್ಟು ತಿಂಗಳಕಾಲ ಕನ್ನಡ ಚಿತ್ರಗಳನ್ನು ಕಡ್ಡಾಯವಾಗಿ ತೋರಿಸಲೇಬೇಕೆಂದು ಹೇಳಿ. ನಮ್ಮ ಕನ್ನಡ ಭಾಷೆಯ ಚಿತ್ರಗಳನ್ನು ಬೇರೆ ರಾಜ್ಯಗಳಲ್ಲಿ ಹಾಕುವುದಿಲ್ಲ ಎಂದು ಯಾರಾದರೂ ಹೇಳಿದರೆ, ನಿಮ್ಮ ಭಾಷೆಯ ಚಿತ್ರಗಳನ್ನು ನಮ್ಮ ಕರ್ನಾಟಕದಲ್ಲೂ ಹಾಕುವುದಿಲ್ಲ ಎಂದು ಹೇಳುವಂಥ ನಿಷ್ಪ್ರೂರವಾದ ನಿರ್ಣಯವನ್ನು ತೆಗೆದುಕೊಳ್ಳಿ, ಅದನ್ನು ಬಿಟ್ಟು ಬೇರೆ ಅರ್ಥದಲ್ಲಿ ಹೇಳಿದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಸ್ಪಷ್ಟವಾದ ಉತ್ತರವನ್ನು ಕೊಡಲಿ.

ಉಪಾಧ್ಯಕ್ಷರು : ಇದರ ಪ್ರಾಮುಖ್ಯತೆಯನ್ನು ಮನಗಂಡು ಈ ಸದನದ ಹಲವಾರು ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಅಪೇಕ್ಷಿಪಡುತ್ತಿದ್ದಾರೆ. ಇದೇ ವಿಷಯವನ್ನೇ ಚರ್ಚೆ ಮಾಡೋಣವೆಂದು ಹೇಳುವುದಾದರೆ ಇದೇ ವಿಷಯವನ್ನೇ ಚರ್ಚೆಮಾಡೋಣ. ಇದಕ್ಕೆ ಸದನ ಏನು ಹೇಳುತ್ತದೊ ಹೇಳಲಿ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್ : ನಮ್ಮ ಕರ್ನಾಟಕದಲ್ಲಿ ಕನ್ನಡ ಉಳಿಯಬೇಕಾದರೆ ಬೆಂಗಳೂರು ಬಹಳ ಪ್ರಾಮುಖ್ಯವಾದುದು. ಬೆಂಗಳೂರಿನಲ್ಲಿ ಕನ್ನಡಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕಾದ್ದು ಅಗತ್ಯವಿದೆ. ಚಿತ್ರಮಂದಿರದವರು ವ್ಯಾವಹಾರಿಕವಾಗಿ ತಮಗೆ ಲಾಭವಾಗುವಂಥ ರೀತಿಯಲ್ಲಿ ಇಲ್ಲಿ ಪ್ರಸ್ತಾವನೆಯನ್ನು ತರುತ್ತಾರೆ. ಇವತ್ತು ನಮ್ಮ ಕನ್ನಡ ಭಾಷೆಯ ಬೆಳವಣಿಗೆ ಆಗಬೇಕು. ಕಳೆದ 50 ವರ್ಷದಿಂದ ಇಲ್ಲೇ ಇರುವವವೂ ಕನ್ನಡವನ್ನು ಕಲಿಯದೇ ತಮ್ಮದೇ ಭಾಷೆ ಮಾತನಾಡಿಕೊಂಡು ಇಲ್ಲಿ ಬೆಳೆಯುತ್ತಿದ್ದಾರೆ. ನಾವು ನಿರಭಿಮಾನಿಗಳೆಂಬುದನ್ನು ಒಪ್ಪಿಕೊಂಡರೂ ಸರ್ಕಾರದವರು ಕನ್ನಡ ಚಿತ್ರಗಳ ಬೆಳವಣಿಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕಾಗಿದೆ. ಕನ್ನಡವನ್ನು ಬೆಳೆಸುವುದಕ್ಕೆ, ಕನ್ನಡ ಚಿತ್ರಗಳು ಉತ್ತಮವಾದುವು ಬರುವುದಕ್ಕೆ ಅವಶ್ಯಕವಾಗಿ ಕೊಡುವಂಥ ಸಹಾಯಧನವನ್ನು ಸಕಾಲದಲ್ಲಿ ಕೊಡಬೇಕು. ಈ ದಿಸೆಯಲ್ಲಿ ಸರ್ಕಾರ ಮಾಡಬೇಕಾದ ಕೆಲಸವೇ ಬಹಳ ಇದೆ. ಈ ಬೆಂಗಳೂರು

ನಗರದಲ್ಲಿ ಕನ್ನಡವನ್ನು ಬೆಳೆಸುವುದಕ್ಕೆ ಸರ್ಕಾರವೇ ಹೆಚ್ಚಿನ ಆದ್ಯತೆಕೊಡಬೇಕಾಗಿದೆ. ಚಲನಚಿತ್ರ ಮಂದಿರಗಳಿಗೆ ಕಡ್ಡಾಯವಾಗಿ ನಡೆಸುವುದಕ್ಕೆ ಆದೇಶ ಕೊಡಬೇಕು.

ಉಪಾಧ್ಯಕ್ಷರು : ಎಲ್ಲರೂ ಮಾತನಾಡುತ್ತೀರಿ. ಎಲ್ಲರಿಗೂ ಅವಕಾಶ ಕೊಡುವುದಕ್ಕಾಗುವುದಿಲ್ಲ.

ಶ್ರೀ ಜೆ.ಬಿ. ಶಿವಕುಮಾರ್ : ಯಾರು ಎಷ್ಟು ಗಂಟೆ ಬೇಕಾದರೂ ಮಾತನಾಡಬಹುದು. ಮಾನ್ಯ ಸಚಿವರು ಒಂದು ಸಮಿತಿ ರಚನೆ ಮಾಡಿದ್ದಾರೆ. ಕನ್ನಡ ಭಾಷೆಯ ಅಗ್ರಸ್ಥಾನ ಕೊಡಬೇಕು. ಪರಭಾಷೆಯಲ್ಲಿ ನೀತಿ ಬೋಧಕ ಇಲ್ಲವೆಂದು ಅಲ್ಲ. ಅಗ್ರಸ್ಥಾನ ಕನ್ನಡಕ್ಕೆ, ಅಲ್ಲಿ ಅದು ಮುಗಿಯಿತು. ಮಾನ್ಯ ಸಚಿವರು ಸಮಿತಿ ಮಾಡುತ್ತೇವೆಂದು ಹೇಳಿದ್ದಾರೆ. ನಾನು ತಮ್ಮ ಮೂಲಕ ಸಲಹೆ ಕೊಡುವುದು ಇಷ್ಟೆ. ಹಿಂದಿನ ಕಾಲದಲ್ಲಿ ನೋಡಿರಬಹುದು, ವಾರದಲ್ಲಿ ಎರಡು ದಿನ ಮಾರ್ನಿಂಗ್ ಷೋ, ಮ್ಯಾಟ್ನಿ ಇದ್ದದ್ದು. ಇವತ್ತು ದುರಾದೃಷ್ಟ, ನಗರದಲ್ಲಿ ಪಟ್ಟಣ ಪ್ರದೇಶಗಳಲ್ಲಿ ಬೆಳಿಗ್ಗೆ 9ಕ್ಕೆ ಸಿನೆಮಾ. ಬೆಳಿಗ್ಗೆ 9ಕ್ಕೆ ನಮ್ಮ ಗ್ರಾಮಾಂತರ ಪ್ರದೇಶದ ಮಕ್ಕಳು ಬಂದು ಕ್ಯೂ ನಿಂತುಕೊಳ್ಳುತ್ತಾರೆ. ಬಸ್ಸನ್ನು ಇಟ್ಟಿರುವುದು ಶಾಲಾ ಕಾಲೇಜುಗಳಿಗೆ ಬರತಕ್ಕ ಮಕ್ಕಳಿಗೆ. ಆದರೆ ಅಲ್ಲಿ 90 ಭಾಗ ಬರತಕ್ಕವರು ಚಲನಚಿತ್ರಗಳಿಗೆ. ಆ ದೃಷ್ಟಿಯಿಂದ ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಚಲನಚಿತ್ರ ಪ್ರದರ್ಶನ ಸಂಖ್ಯೆ ಇಳಿಸುವುದಕ್ಕೆ ಸರ್ಕಾರ ಗಮನಕ್ಕೆ ತೆಗೆದುಕೊಳ್ಳಬೇಕು. ವಿಶೇಷವಾಗಿ ಗ್ರಾಮಾಂತರ ಪ್ರದೇಶದ ಮಕ್ಕಳು ದುಷ್ಪರಿಣಾಮಕ್ಕೆ, ಕೆಟ್ಟ ಪರಿಣಾಮಕ್ಕೆ ಗುರಿಯಾಗಿದ್ದಾರೆ; ಅದರಲ್ಲೂ ವಿಶೇಷವಾಗಿ ಮಹಿಳೆಯರು. ಇಂಥ ಕೆಟ್ಟ ಪರಿಣಾಮ ಬೀರತಕ್ಕ ಕನ್ನಡ ಚಿತ್ರಗಳ ಪ್ರದರ್ಶನ ಸಂಖ್ಯೆಯನ್ನು ಇಳಿಸಬೇಕೆಂಬುದು ಒಂದು. ಚಲನಚಿತ್ರ ಮಂದಿರ ಎಷ್ಟು ಕುಲಗೆಟ್ಟಿದೆ ಎಂದರೆ ಸಿನೆಮಾ ಥಿಯೇಟರನಿಂದ ಹೊರಗೆ ಬರಬೇಕಾದರೆ, ಈ ಕಡೆ ಬಾಗಿಲಿನಿಂದ ಒಳಗೆ ಹೋಗುತ್ತಾರೆ. ಫ್ಯೂಮಿಗೇಷನ್ ಇಲ್ಲ, ಅಲ್ಲಿ ಲ್ಯಾವೆಟ್ರಿ ಕ್ಲೀನಾಗಿ ಇರುವುದಿಲ್ಲ, ಅಂಟುಜಾಡ್ಯ ರೋಗ ಬರುತ್ತದೆ, ಅಂತ ವಾತಾವರಣ ಇರುತ್ತದೆ. ಸರ್ಕಾರ ಸಮಿತಿ ಮಾಡಿದಾಗ ಕುಣಿತ ಪಣಿತ ಎಲ್ಲಾ ಕಂಟ್ರೋಲ್ ಮಾಡಿ ಎಂದು ಸಲಹೆ ಕೊಡುವುದಕ್ಕೆ...

ಉಪಾಧ್ಯಕ್ಷರು : ಅವರು ಒಂದು ಸಮಿತಿ ಮಾಡಿ ಸಭೆ ಕರೆಯುತ್ತೇವೆಂದು ಹೇಳಿದ್ದಾರೆ. ಅದರಲ್ಲಿ ಶಿವಕುಮಾರ್ ಅವರನ್ನು ಕರೆಯಿರಿ ಎಂದು ಹೇಳುತ್ತೇನೆ.

ಶ್ರೀ ಜೆ.ಬಿ. ಶಿವಕುಮಾರ್ : ತಾವು ಹೇಳುವವರಿಗೆ ಅವಕಾಶ ಕೊಡುವುದಿಲ್ಲ. ದಯವಿಟ್ಟು ಸಲಹೆ ಕೊಟ್ಟಾಗ ತಾವು ಸ್ವೀಕರಿಸಬೇಕು.

ಉಪಾಧ್ಯಕ್ಷರು : ಆ ಸಮಿತಿಯಲ್ಲಿ ತಮ್ಮನ್ನು ಕರೆಯುತ್ತೇವೆಂದು ಹೇಳುತ್ತಾರೆ.

ಶ್ರೀ ಬಿ. ಶಿವರಾಮು : ಮಾನ್ಯ ಅಧ್ಯಕ್ಷರೆ, ಪುರಸಭೆ ಚುನಾವಣೆ ಫೆಬ್ರವರಿ 13ಕ್ಕೆ ನಿಗದಿಯಾಗಿತ್ತು.

ಶ್ರೀ ವಾಟಾಳ್ ನಾಗರಾಜ್ : ನಾವು ಕೇಳಿದ್ದೆಕ್ಕೆ ಏನು ಉತ್ತರ ಕೊಡಲಿಲ್ಲ.

ಉಪಾಧ್ಯಕ್ಷರು : ನಾಳೆ ಸಮಿತಿ ಕರೆಯುತ್ತೇವೆಂದು ಹೇಳಿದ್ದಾರೆ; ಅದರಲ್ಲಿ ತಮ್ಮನ್ನು ಕರೆಯುತ್ತೇವೆಂದು ಹೇಳಿದ್ದಾರೆ. ಹೇಳಿ ನಾಣಯ್ಯನವರೆ, ನಾಳೆ ನಾಡಿದ್ದರಲ್ಲಿ ಸಮಿತಿ ಕರೆದು ಅವರನ್ನು ಕರೆಯುತ್ತೇವೆಂದು ಹೇಳಿದ್ದೀರಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾಜಿ ಮುಖ್ಯಮಂತ್ರಿಗಳು ನನಗೆ ಅವಕಾಶ ಕೊಡಲಿಲ್ಲವೆಂದು ಕುಳಿತಿದ್ದಾರೆ.

ಉಪಾಧ್ಯಕ್ಷರು : ಕೊಡಲಿಲ್ಲವೆಂದು ಹೇಳತಕ್ಕ ಸಂದರ್ಭ ಬಂದಿಲ್ಲ.

ಶ್ರೀ ಎಂ. ಸಿ. ನಾಣಯ್ಯ : ಈಗ ಅವರಲ್ಲೇ ಬಂದಿರತಕ್ಕ ಭಿನ್ನಾಭಿಪ್ರಾಯಗಳು ಇವೆ. ಮಾನ್ಯ ವೀರಪ್ಪ ಮೊಯಿಲಿಯವರಿಗೆ ಹೇಳಬೇಕೆಂದರೆ ಅದಕ್ಕೆ ಸಂಬಂಧಪಟ್ಟವರೆಲ್ಲರನ್ನು ಕರೆಸಿ ಪುನಃ ಒಂದು ಬಾರಿ ಚರ್ಚೆ ಮಾಡುತ್ತೇವೆ. ದಯವಿಟ್ಟು ಕನ್ನಡ ಚಲನಚಿತ್ರ ಉದ್ಯಮಕ್ಕೆ ನೀವೆಲ್ಲ ಒಂದಾಗಿ ಕೆಲಸ ಮಾಡಬೇಕೆಂದು ಹೇಳುತ್ತಿರತಕ್ಕದ್ದು ಮತ್ತು ಸರ್ಕಾರ ಎಷ್ಟರವರೆಗೆ ಹೋಗಬಹುದು, ಎಷ್ಟುದೂರ ದೂರ ಹೋಗಬಹುದೆಂಬುದನ್ನು ಯೋಚನೆಯಲ್ಲಿಟ್ಟುಕೊಂಡು ನಾವು ಈ ಕೆಲಸ ಮಾಡುತ್ತೇವೆ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್ : ನಿರ್ಮಾಪಕರು ಏನಿದ್ದಾರೆ ಅವರು ತಮಿಳು ಬೇರೆ ಬೇರೆ ಭಾಷೆಗಳ ಚಿತ್ರಗಳನ್ನು ನಿರ್ಮಾಣ ಮಾಡುವವರು ಇದ್ದಾರೆ. ನಾವು ಅವರಿಗೆ ಬಿಟ್ಟರೆ ಆಗುವುದಿಲ್ಲ. ಅವರು ವ್ಯವಹಾರಿಕವಾಗಿ ನೋಡುತ್ತಾರೆ. ಇಲ್ಲಿ ಎಷ್ಟು ಅವರಿಗೆ ಸಂಪಾದನೆ ಮಾಡುವುದಕ್ಕೆ ಅನುಕೂಲವಾಗುತ್ತದೆ ಆ ಚಿತ್ರಗಳನ್ನು ತರುತ್ತಾರೆ. ಸರ್ಕಾರ ಇದರಲ್ಲಿ ಭಾಗವಹಿಸಬೇಕಾಗುತ್ತದೆ. ಅವರಿಗೆ ಬಿಟ್ಟರೆ ಆಗುವುದಿಲ್ಲ. ಇದು ಭಾಷೆಯ ವ್ಯವಹಾರ ಇದೆ. ಇದು ಕರ್ನಾಟಕದ ಅಳಿವು ಉಳಿವಿನ ಪ್ರಶ್ನೆ ಇದೆ; ಭಾಷೆ ಪ್ರಶ್ನೆ ಇದೆ. ಕನ್ನಡಕ್ಕೆ ಆದ್ಯತೆ ಕೊಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನಾನು ತಮಗೆ ಏನು ಹೇಳಿದೆನೆಂದರೆ ಮೊದಲಿನಿಂದಲೂ ಒಂದು ವಿಚಾರವನ್ನು ಸಂಸದೀಯ ಸಚಿವರ ಗಮನಕ್ಕೆ ತಂದೆ. ಏಳೂವರೆ ಕೋಟಿ ರೂಪಾಯಿ ಕನ್ನಡ ಚಿತ್ರರಂಗಕ್ಕೆ ಕೊಡಬೇಕಾದ ಹಣವನ್ನು ಇನ್ನೂ ಇಟ್ಟುಕೊಂಡಿದ್ದಾರೆ. ಚಿತ್ರರಂಗ ಬೆಳೆ ಎಂದರೆ ಹೇಗೆ ಬೆಳೆಯುವುದಕ್ಕಾಗುತ್ತದೆ ? ನೀವು ಸರ್ಕಾರ ಕೈತೊಳೆದುಕೊಳ್ಳುವುದು ಅಲ್ಲ. ನಮಗೆ ಏನು ಸಂಬಂಧಪಟ್ಟದ್ದು ಅಲ್ಲ ಅವರಿಗೆ ಸಂಬಂಧಪಟ್ಟದ್ದು ಎಂದು ಹೇಳಿ ಹಾಗೆ ಕೈತೊಳೆದುಕೊಳ್ಳುವುದಿಲ್ಲ. ಸರ್ಕಾರ ಸ್ಪಷ್ಟವಾಗಿ ಹೇಳಬೇಕು. ಸರ್ಕಾರಕ್ಕೆ ಹೆಚ್ಚಿನ ಜವಾಬ್ದಾರಿ ಇದೆ. ಕನ್ನಡ ಚಿತ್ರರಂಗದ ಬೆಳವಣಿಗೆ ಬಗ್ಗೆ ಏನು ಸರ್ಕಾರ ಯೋಜನೆ ಹಾಕಿಕೊಂಡಿದೆ ಆ ಯೋಜನೆ ವಿಫಲವಾಗುತ್ತಿದೆ. ಅವರ ನೀತಿ ವಿಫಲವಾಗುತ್ತಿದೆ. ಇವತ್ತು ಮೊದಲಿನಿಂದ ಕನ್ನಡ ಚಿತ್ರದ ಬೆಳೆವಣಿಗೆ ಅವರು ಇಟ್ಟುಕೊಂಡಿರತಕ್ಕ ಸಂಪೂರ್ಣ ಸಹಾಯಧನ ಎಷ್ಟು ಕೊಡುತ್ತಾರೆ ಅದೆಲ್ಲವನ್ನು ಕೊಡಬೇಕು. ಅದರ ಬೆಳವಣಿಗೆಗೆ ಏನೇನು ಸಹಕಾರ ಬೇಕು ಅದೆಲ್ಲವನ್ನು ಮಾಡಬೇಕು. ಇದರ ಜೊತೆಗೆ ಚಿತ್ರ ಮಂದಿರಗಳಿಗೆ ಸ್ಪಷ್ಟ ನಿರ್ದೇಶನವನ್ನು ಕಾಯಿದೆ ಮೂಲಕ ಮಾಡಬೇಕಾಗುತ್ತದೆ. ಸುಮ್ಮನೆ ಇವರು ಉಪದೇಶ ಮಾಡಿ ಮಂತ್ರ ಹೇಳಿದರೆ, ಅದು ಆಗುವುದಕ್ಕೆ ಸಾಧ್ಯವಿಲ್ಲ. ಇವರು ಸ್ಪಷ್ಟವಾದ ನಿಲುವನ್ನು ಹೇಳಬೇಕು. ಪರಭಾಷೆ ಚಿತ್ರಗಳನ್ನು ರದ್ದು ಮಾಡುತ್ತೇವೆಂಬ ಮಾತನ್ನು ಸ್ಪಷ್ಟಪಡಿಸಬೇಕೆಂದು ತಮ್ಮ ಮೂಲಕ ಹೇಳುತ್ತಿದ್ದೇನೆ.

ಒಬ್ಬ ಮಾನ್ಯ ಸದಸ್ಯರು : ಪರಭಾಷೆ ಚಿತ್ರಗಳನ್ನು ರದ್ದುಮಾಡಬೇಕೆಂದು ಹೇಳಿದರೆ ಆಗುವುದಿಲ್ಲ.

ಉಪಾಧ್ಯಕ್ಷರು : ನಾನು ಮೊಯಿಲಿಯವರನ್ನು ಕರೆದಿದ್ದೇನೆ, ದಯವಿಟ್ಟು ಕುಳಿತುಕೊಳ್ಳಿ

ಒಬ್ಬ ಮಾನ್ಯ ಸದಸ್ಯರು : ನಾನು ಸ್ವಲ್ಪ ಹೇಳುವರೆಗೆ ದಯವಿಟ್ಟು ಕೇಳಿ ವಾಟಾಳ್ ನಾಗರಾಜ್ ಅವರು ರಸ್ತೆ ಮಾಡಬೇಕೆಂದರೆ ಮನರಂಜನೆ ಏತಕ್ಕೆ ಇರಬೇಕು? ಕನ್ನಡಕ್ಕೆ ಆದ್ಯತೆ ಇರಬೇಕು, ಪ್ರಾಧಾನ್ಯತೆ ಇರಬೇಕು, ಅದು ಬಿಟ್ಟು ಇಲ್ಲ ರಸ್ತೆ ಮಾಡಿ, ಕರ್ನಾಟಕ್ಕೆ ಯಾವ ಚಿತ್ರ ಬೇಡ ಎಂದು ಹೇಳುವುದು ತಪ್ಪಾಗುತ್ತದೆ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್ : ಕೆಲವು ದೃಷ್ಟಿಯಿಂದ ಅದು ಅನಿವಾರ್ಯವಾಗಬಹುದು. ಈ ರಾಜ್ಯದಲ್ಲಿ ಇಂಥ ಕಾರ್ಯ ಮಾಡಬೇಕಾಗಿದೆ.

ಉಪಾಧ್ಯಕ್ಷರು : ಕುಳಿತುಕೊಳ್ಳಿ, ಇಲ್ಲಿ ಮಾತನಾಡುವಾಗ ಒಂದು ನಿಯಮವನ್ನು ಅನುಸರಿಸಬೇಕು. ಅಧ್ಯಕ್ಷರ ಅಪ್ಪಣೆ ತೆಗೆದುಕೊಂಡು ಮಾತನಾಡಬೇಕು. ಅದು ಬಿಟ್ಟು ತಮಷ್ಟಕ್ಕೇ ತಾವೇ ಎದ್ದು ನಿಂತು ಮಾತನಾಡುವುದು ಸರಿಯಲ್ಲ. ಈಗ ಮೊಯಿಲಿಯವರು ಮಾತನಾಡಿ.

+ಶ್ರೀ ಎಂ. ವೀರಪ್ಪ ಮೊಯಿಲಿ (ಕಾರ್ಕಳ) : ಮಾನ್ಯ ಅಧ್ಯಕ್ಷರೆ, ಇದೆಲ್ಲ ಚರ್ಚೆ ಆದಮೇಲೆ ನನಗೆ ಅನಿಸಿದ ಅನಿಸಿಕೆ ಏನೆಂದರೆ ಈಗ ಬರೀ ನಮ್ಮ ಕನ್ನಡ ಚಿತ್ರಗಳು ಒಳ್ಳೆಯ ಮಟ್ಟದಲ್ಲಿ ಇಲ್ಲ ಎನ್ನುವ ಈ ವಾದ ಸರಿಯಾದ ವಾದ ಅಲ್ಲವೆಂದು ನನಗನ್ನಿಸುತ್ತದೆ. ನಾನು 1980-83ರಲ್ಲಿ ಹಣಕಾಸಿನ ಸಚಿವನಾಗಿದ್ದಾಗ ಕನ್ನಡ ಪ್ರದರ್ಶಕರು ಪ್ರದರ್ಶನ ಮಾಡುತ್ತಿರಲಿಲ್ಲ. ಆಗ 50ಪರ್ಸೆಂಟ್ ರಿಯಾಯಿತಿಯನ್ನು ನೇರವಾಗಿ ಕನ್ನಡ ಚಿತ್ರಕ್ಕೆ ಕೊಟ್ಟಾಗ ಪ್ರದರ್ಶಕರಿಗೆ ಆದಾಯ ಆಯಿತು; ನಿರ್ಮಾಪಕರಿಗೆ ಮತ್ತು ಥಿಯೇಟರಗಳಿಗೂ ಒಂದು ರೀತಿಯ ವಾತಾವರಣ ಬಂತು ಒಂದು ಕಾಲಕ್ಕೆ ಅದು ನಡೆಯಿತು. ಅಶ್ಲೀಲತೆ ಕನ್ನಡದಲ್ಲಿ ಕಡಿಮೆ ಏನೂ ಇಲ್ಲ. ಸಾಕಷ್ಟು ಅಶ್ಲೀಲತೆ ಚಿತ್ರಗಳು ಬಂದಿವೆ. ಬರೀ ತಮಿಳಿನಲ್ಲಿ ಅಲ್ಲ. ಇದು ಎಲ್ಲಾ ಭಾಷೆಗಳಿಗೂ ಕೂಡ ಅನ್ವಯವಾಗುತ್ತದೆ. ಅಲ್ಲಿ ಹೆಚ್ಚು ಇಲ್ಲಿ ಕಡಿಮೆ ಎಂದು ಅಲ್ಲ. ಇಲ್ಲ ಬರೀ ವಿತರಕರು ಮತ್ತು ನಿರ್ಮಾಪಕರ ಪ್ರಶ್ನೆ ಎಂದು ತಾವು ತಿಳಿದುಕೊಳ್ಳಬಾರದು. ಇದರಲ್ಲಿ ಏನಾಗಿದೆ ಎಂದರೆ ಪ್ರಮುಖ ಪ್ರದರ್ಶಕರು ಏನು ಮಾಡುತ್ತಾರೆ, ಪ್ರಾಮುಖ್ಯವಾದ ಥಿಯೇಟರಗಳನ್ನು ಕನ್ನಡ ಚಿತ್ರಗಳಿಗೆ ಕೊಡುವುದಿಲ್ಲ. ಅಂಥ ಒಳ್ಳೆಯ ಥಿಯೇಟರ್ ಕೊಟ್ಟರೆ ಕನ್ನಡ ಪಿಕ್ಚರ್ ಕೂಡ ಹಿಂದಿ ಪಿಕ್ಚರ್ ಹಾಗೆ ನಡೆಯುತ್ತದೆ. ಏಕೆಂದರೆ ಹೆಚ್ಚು ಪಿಕ್ಚರ್ ಅದೇ ರೀತಿ ಮಾಡಿದರೆ ಜನರ ಅಭಿರುಚಿ ಕೂಡ ಅದೇ ರೀತಿಯಲ್ಲಿ ಬೆಳೆಯುತ್ತದೆ. ದಯವಿಟ್ಟು ಒಳ್ಳೆಯ ಥಿಯೇಟರ್ ಕೊಡಬೇಕು. ಈಗ ಪ್ರಶ್ನೆ ಏನೆಂದರೆ ಸರ್ಕಾರ ತಾವು ಪ್ರವೇಶ ಮಾಡಬೇಕು. ಇದು ವಿತರಕರ ಮತ್ತು ನಿರ್ಮಾಪಕರ ಜಗಳ ಅಲ್ಲ. ಇಲ್ಲಿ ನೀವು ಪ್ರದರ್ಶಕರಿಗೆ ಇನಸೆಂಟೀವ್ ಕೂಡ ಕೊಡಬೇಕಾಗುತ್ತದೆ. ಒಂದು ಇನಸೆಂಟೀವ್ ಸ್ಕೀಂ ಕೂಡ ಮಾಡಿ, ಅನೇಕ ಬಾರಿ ಬಹಳ ಥಿಯೇಟರಗಳಲ್ಲಿ ಒಂದು ವಾರ ಆದಕೂಡಲೇ ಟರ್ಮಿನೇಟ್ ಮಾಡುತ್ತಾರೆ. ಇದು ಅನೇಕ ಬಾರಿ ಆಗಿದೆ. ಆ ಪಿಕ್ಚರ್ ಬೆಳೆಯುವುದು ಹೇಗೆ? ಅದಕ್ಕೆ ಏನು ಮಾಡುತ್ತೀರಿ? ಅಡ್ಡದಾರಿ ಹಿಡಿಯುತ್ತಾರೆ. ಎಲ್ಲ ಅಶ್ಲೀಲ ಚಿತ್ರ ಸಣ್ಣ ಸಣ್ಣ ಪಿಕ್ಚರ್ ಮಾಡಿ ವಾತಾವರಣ ಕೆಡಿಸುತ್ತಿದ್ದಾರೆ. ಇತ್ತೀಚೆಗೆ ಬಹಳಕೆಟ್ಟು ಹೋಗಿದೆ. ಆದ್ದರಿಂದ ಆ ಬಗ್ಗೆ ಇನಸೆಂಟೀವ್ ಸ್ಕೀಂ ವರ್ಕೌಟ್ ಮಾಡಿ ಹೆಚ್ಚಾಗಿ ಪ್ರದರ್ಶಕರು ಯಾವ ರೀತಿಯಲ್ಲಿ ಅವರು ಥಿಯೇಟರ್ ಕೊಡಲಿ ಪ್ರದರ್ಶನ

ಮಾಡಬೇಕು. ಕೆಲವು ಸಾರಿ ಏನಾಗುತ್ತದೆಂದರೆ ಕನ್ನಡದವರು ಕೂಡ ಅಷ್ಟೆ, ಕೆಲವರೇ ನಿರ್ಮಾಪಕರು ವಿತರಕರು ಕಂಟ್ರೋಲ್ ಮಾಡುತ್ತಾರೆ. ಆದುದರಿಂದ ಅನೇಕ ನಿರ್ಮಾಪಕರಿಗೆ ಪ್ರೊಡ್ಯೂಸರಗಳಿಗೆ ಅವಕಾಶ ಇಲ್ಲ. ಈ ತರಹ ಕೆಲವು ಸಮಸ್ಯೆಗಳು ಹೊಸದಾಗಿ ಉದ್ಭವವಾಗಿವೆ. ಇದನ್ನೆಲ್ಲ ತಾವು ವಿಚಾರ ಮಾಡಿ ಇದರ ಬಗ್ಗೆ ಸರ್ಕಾರ ಮುಖ್ಯ ಪಾತ್ರ ವಹಿಸಿಕೊಡಬೇಕು. ಒಂದು ಇನಸೆಂಟೀವ್ ಸ್ಕೀಂ ವರ್ಕೌಟ್ ಮಾಡಬೇಕು. ಒಂದು ವಾತಾವರಣ ಕ್ರಿಯೇಟ್ ಮಾಡಬೇಕು. ಆದರೆ ಪಿಕ್ಚರ್ ತೆಗೆಯುವವರಿಗೆ ಏನುತೊಂದರೆ ಇಲ್ಲ. ನಮ್ಮಲ್ಲಿ ಸಾಕಷ್ಟು ಅದ್ಭುತವಾಗಿ ಪಿಕ್ಚರ್ ತೆಗೆಯುವುದಕ್ಕೆ ಶಕ್ತಿ ಇದೆ, ಮಾಡುತ್ತಾರೆ, ಜನರು ಕೂಡ ನೋಡುತ್ತಾರೆ. ಆದರೆ ಇತ್ತೀಚೆಗೆ ಅಭಿರುಚಿ ಎಲ್ಲಾ ಕೆಟ್ಟುಹೋಗಿದೆ. ಅಭಿರುಚಿ ಕೆಟ್ಟು ಹೋಗಿದೆ ಎಂದರೆ ಅಲ್ಲೇ ಬಿಡುವುದಲ್ಲ. ಆದ್ದರಿಂದ ಅದರ ಬಗ್ಗೆ ವ್ಯಾಪಕವಾಗಿ ಚರ್ಚೆ ಮಾಡುವುದಿದ್ದರೆ ನಾವೆಲ್ಲ ಬಂದು ಸಲಹೆ ಕೊಡುತ್ತೇವೆ. ಕನ್ನಡ ಚಿತ್ರರಂಗದಲ್ಲಿ ನಿಜವಾದ ಸಮಸ್ಯೆ ಇದೆ. ಬಹುಶಃ ಯಾರು ಒಳ್ಳೆಯ ನಿರ್ಮಾಪಕರು, ಒಳ್ಳೆಯ ಪ್ರೊಡ್ಯೂಸರ್ಸ ಇವತ್ತು ಕನ್ನಡ ಚಿತ್ರ ನಿರ್ಮಾಣ ಮಾಡದೆ ಇರತಕ್ಕ ಪರಿಸ್ಥಿತಿ ಇವತ್ತು ಉದ್ಭವವಾಗಿದೆ ಅದಕ್ಕೆ ವಿತರಕರು ಕಾರಣ, ಪ್ರದರ್ಶಕರು ಕಾರಣ. ಬಹುಶಃ ಸರ್ಕಾರ ಮಧ್ಯೆ ಪ್ರವೇಶ ಮಾಡಿ, ಈ ವಾತಾವರಣ ಸರಿ ಮಾಡಿದಿದ್ದರೆ, ಕರ್ನಾಟಕದ ಕನ್ನಡ ಚಿತ್ರ ಜಗತ್ತಿಗೆ ದೊಡ್ಡ ನಷ್ಟವಾಗುತ್ತದೆಂದು ಮಾತ್ರ ಎಚ್ಚರಿಕೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

+ ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಸಭಾಧ್ಯಕ್ಷರೆ, ಈಗ ರಾಜ್ಯಾದ್ಯಂತ ಅನಿವಾರ್ಯ ಕಾರಣಗಳಿಂದ ನಾವು ಹೋರಾಟಕ್ಕೆ ಇಳಿಯುತ್ತೇವೆಂದು ಡಾ: ರಾಜಕುಮಾರ್ ಅವರು ಹೇಳಿದ್ದಾರೆ. ಎರಡು ಮೂರು ಸಾರಿ ನೀವು ಏನೇನು ಮಾತುಕತೆ ನಡೆಸಿದ್ದೀರಿ? ಆ ಮಾತುಕತೆ ನಡೆಯುವಂಥ ಕಾಲದಲ್ಲಿ ಹೌಸ್ ನಡೆಯುವ ಕಾಲದಲ್ಲಿ ಆಸಕ್ತಿ ಇರುವ ವಿರೋಧ ಪಕ್ಷದ ಪ್ರಮುಖರನ್ನು ಕರೆದು ಮಾತನಾಡಿದ್ದಾರೆ. ಕಷ್ಟ ಏನು? ಇದನ್ನು ಯಾರಿಗೂ ತಿಳಿಸದೆ ನಮ್ಮನ್ನು ಕತ್ತಲಲ್ಲಿ ಇಡುವ ಪ್ರಯತ್ನ ಮಾಡುತ್ತಿದ್ದೀರಿ. ಇವತ್ತು ರಾಜ್ಯದಲ್ಲಿ ಒಂದು ಆಂದೋಳನ ರೂಪದಲ್ಲಿ ನಡೆಯುವುದಕ್ಕೆ ಅವಕಾಶ ಮಾಡಿಕೊಡದೆ ಅವರ ಬೇಡಿಕೆ ಈಡೇರಿಸುವುದು ಆದ್ಯ ಕರ್ತವ್ಯ. ಮಾನ್ಯ ವಾಟಾಳ್ ನಾಗರಾಜ್ ಅವರು ಪ್ರಸ್ತಾಪ ಮಾಡಿದರು; ನಾವು ಕನ್ನಡದ ಬಗ್ಗೆ ದೊಡ್ಡ ದೊಡ್ಡ ಮಾತನಾಡುತ್ತೇವೆಂಬ ಕಳಕಳಿಯನ್ನು ಶ್ರೀ ಜೆ.ಹೆಚ್. ಪಟೇಲರು ವ್ಯಕ್ತ ಮಾಡಿದರು. ಅವರಿಗೆ ಕೊಡಬೇಕಾದ ಭಾಗವನ್ನು ಕೊಡುವುದಕ್ಕೆ ಏನು ಸ್ವಾಮಿ ತೊಂದರೆ ಸರ್ಕಾರ ಅಧಿಕಾರದಲ್ಲಿದ್ದಾಗ. ಕನ್ನಡ ಚಿತ್ರವನ್ನು ಯಾವುದೇ ಥಿಯೇಟರನಲ್ಲಿ 5-6 ವಾರ ನಡೆಸದಿದ್ದರೆ ಪರ್ಮಿಷನ್ ಕೊಡುವುದಿಲ್ಲ, ಬೇರೆ ಚಿತ್ರಗಳಿಗೆ ಅವಕಾಶ ಕೊಡುವುದಿಲ್ಲವೆಂದು ಅಲ್ಲಿರತಕ್ಕವರು ಕನ್ನಡ ಚಿತ್ರಗಳಿಗೆ ಹೋಗುತ್ತಾರೆ, ಬೇರೆ ಜನರಿಗೆ ಕನ್ನಡ ಚಿತ್ರ ನೋಡುವ ಆಸಕ್ತಿ ಬರುತ್ತದೆ. ಜನರಿಗೆ ಸಿನೆಮಾ ನೋಡುವ ಹುಚ್ಚು ಇದೆ. ಜನರಿಗೆ ಯಾವುದೇ ಸಿನೆಮಾ ಇದ್ದರೂ ಹೋಗುವುದು ಅಭ್ಯಾಸವಾಗುತ್ತದೆ. ನಂತರ ಬೇರೆಯವರಿಗೆ ಆದ್ಯತೆ ಕೊಡೋಣ. ನಾವು ಬೇರೆ ಚಿತ್ರಗಳನ್ನು ಇಲ್ಲಿ ಹಾಕಲೇಬಾರದೆಂದು ಹೇಳುವುದಿಲ್ಲ. ಈ ಬೇಡಿಕೆಯನ್ನು ಈಡೇರಿಸದೆ ದೀರ್ಘಾವಧಿ ಮುಂದುವರಿಸಿಕೊಂಡು ಹೋಗಿ ದೊಡ್ಡ ಆಂಧೋಲನ ಗೊಂದಲಕ್ಕೆ ಅವಕಾಶ ನೀವು ಏತಕ್ಕೆ ಮಾಡಿಕೊಡುತ್ತೀರಿ? ಅದಕ್ಕೋಸ್ಕರ ಅವರ ಬೇಡಿಕೆ ಏನಿದೆ ಅದು ನ್ಯಾಯಬದ್ಧವಾಗಿದೆ ಅದನ್ನು

ಈಡೇರಿಸುವ ನಿರ್ದಿಷ್ಟ ಕಾರ್ಯಕ್ರಮ ಘೋಷಣೆ ಮಾಡಿ. ಸಭೆ ಕರೆದು ಚರ್ಚೆ ಮಾಡುತ್ತೇವೆ, ವಾಟಾಳ್ ನಾಗರಾಜ್ ಅವರೆ ನೀವು ಬನ್ನಿ, ನಾನು ಬರುತ್ತೇನೆಂದು ನಾಣಯ್ಯನವರು ಹೇಳುವುದಕ್ಕೆ ಬದಲಾಗಿ ಅವರ ಬೇಡಿಕೆ ನ್ಯಾಯಬದ್ಧವಾಗಿದೆ. ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವವರು ನೀವು, ಅವರ ನೋವು ನಲಿವು ಗೊತ್ತಿರುವಂತವರು; ನಿಮಗೆ ಆ ಒಂದು ಬೇಡಿಕೆಯನ್ನು ಈಡೇರಿಸುವಂಥ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಬಂದಿರುವ ಕಷ್ಟವೇನು? ಏಕೆಂದರೆ ನೀವು ಹಿಂದೆಮುಂದೆ ಓಡಾಟ ಮಾಡುತ್ತಿದ್ದೀರಿ.

ಶ್ರೀ ಎಂ. ಸಿ. ನಾಣಯ್ಯ : ಸಭಾಧ್ಯಕ್ಷರೆ, ಸ್ಪಷ್ಟವಾಗಿ ಹೇಳಿದ್ದೇನೆ, ಈಗ ತೆಗೆದುಕೊಂಡಿರತಕ್ಕ ಒಂದು ತೀರ್ಮಾನ ಯಾವುದಿದೆ ಈ ತೀರ್ಮಾನದಲ್ಲಿ ಅವರವರಲ್ಲೇ ಒಂದು ಭಿನ್ನಾಭಿಪ್ರಾಯ ಬಂತು ಆದ್ದರಿಂದ ಪುನಃ ಈ ಭಿನ್ನಾಭಿಪ್ರಾಯವನ್ನು ಒಟ್ಟಾಭಿಪ್ರಾಯ ಮಾಡಲಿಕ್ಕೆ ನಿನ್ನೆಯೂ ಕೂಡ ಕೆಲವು ಜನ ಬಂದಿದ್ದರು. ಅದಕ್ಕೋಸ್ಕರ ನಾನು ಪ್ರತಿಯೊಂದು ಹಂತಕ್ಕೆ ಸೇರಿರತಕ್ಕ ಇಬ್ಬಿಬ್ಬರನ್ನು ಕರೆದು ಅಥವಾ ಮೂರುಮೂರು ಜನರನ್ನು ಕರೆದು ಅವರ ಜೊತೆಯಲ್ಲೇ ಪುನಃ ಒಂದು ಚರ್ಚೆಯನ್ನು ಮಾಡಬೇಕೆಂದು ತೀರ್ಮಾನ ಮಾಡಿದ್ದೇನೆ ಮಾನ್ಯ ಸಭಾಪತಿಗಳೆ. ಅದನ್ನು ಎರಡು ದಿವಸದೊಳಗೆ ಪ್ರಯತ್ನ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಈಗ ಸರ್ಕಾರದ ಒಡೆತನದಲ್ಲಿರತಕ್ಕ ಕಣಗಲ್ ಪುಟ್ಟಣ್ಣ ಚಿತ್ರಮಂದರಿದಲ್ಲಿ ಎಲ್ಲಾ ಭಾಷೆ ಚಿತ್ರ ಹಾಕುತ್ತಾರೆ. ಏನು ನೈತಿಕ ಹಕ್ಕಿದೆ ಇವರಿಗೆ, ಸರ್ಕಾರಕ್ಕೆ? ಕನ್ನಡ ಚಿತ್ರವನ್ನು ಕಡ್ಡಾಯವಾಗಿ ಪ್ರದರ್ಶನ ಮಾಡತಕ್ಕದ್ದು ತಮ್ಮ ಸರ್ಕಾರದ ಒಡೆತನದಲ್ಲಿರತಕ್ಕ ಚಿತ್ರಮಂದಿರದಲ್ಲೂ ಇವರು ಕನ್ನಡಚಿತ್ರವನ್ನು ಪ್ರದರ್ಶನ ಮಾಡುವುದಕ್ಕಾಗುವುದಿಲ್ಲ. ಮತ್ತೆ ಇವರು ಏನು ಹೇಳುತ್ತಾರೆ? ಅವರವರೇ ಮಾತನಾಡಿಕೊಳ್ಳುತ್ತಾರೆ, ನಮಗೂ ಅದಕ್ಕೂ ಸಂಬಂಧ ಇಲ್ಲ ಎನ್ನುವ ರೀತಿ ಕೈ ತೊಳೆದುಕೊಳ್ಳುವ ರೀತಿ ಇದು ಒಳ್ಳೆಯದಲ್ಲ. ಆರು ತಿಂಗಳ ಕಾಲ ಕಡ್ಡಾಯವಾಗಿ ಈ ಚಿತ್ರಗಳನ್ನು ಪ್ರದರ್ಶನ ಮಾಡತಕ್ಕ ಕಾಯಿದೆಯನ್ನು ನೀವು ತರಲೇಬೇಕು. ನೀವು ತರುವುದಿಲ್ಲ ಅಂದರೆ ನಿಮ್ಮ ಸರ್ಕಾರಕ್ಕೆ ಇದರ ಬಗ್ಗೆ ಗೌರವ ಇಲ್ಲ, ಕನ್ನಡ ಚಿತ್ರಗಳ ಬೆಳವಣಿಗೆ ಬಗ್ಗೆ ನಿಮಗೆ ನೀತಿ ಇಲ್ಲ. ಆ ದೃಷ್ಟಿಯಿಂದ ಪರಭಾಷಾ ಚಿತ್ರಗಳ ಪರ ನೀವಿದ್ದೀರಿ ಅನ್ನತಕ್ಕಂಥ ಮಟ್ಟಕ್ಕೆ ನಾನು ಬರಬೇಕಾಗುತ್ತದೆ. ಆದ್ದರಿಂದ ನಾನು ಸಭಾತ್ಯಾಗ ಮಾಡುತ್ತಿದ್ದೇನೆ. ಇದು ಸರಿಯಾದ ನೀತಿ ಅಲ್ಲ. ನಿಮ್ಮ ಸರ್ಕಾರದಲ್ಲಿ ಸ್ಪಷ್ಟ ನೀತಿ ಇರಬೇಕು. ನಿಮ್ಮ ಸರ್ಕಾರದ ನೀತಿ ನಿಜವಾಗಿಯೂ ಕನ್ನಡ ಚಿತ್ರರಂಗವನ್ನು ತುಳಿಯತಕ್ಕ ಒಂದು ನೀತಿ ಇದೆಯೇ ಹೊರತು ಬೇರೆ ರೀತಿ ಅಲ್ಲ. ಬೇರೆ ರಾಜ್ಯಕ್ಕೆ ಬರೆಯಿರಿ ಸ್ವಾಮಿ ನೀವು. ನಮ್ಮ ರಾಜ್ಯದಲ್ಲಿ ನಿಮ್ಮ ಭಾಷೆಯ ಚಿತ್ರ ಹೋಗುತ್ತಿದೆ, ನಮ್ಮ ಕನ್ನಡ ಚಿತ್ರಗಳನ್ನು ನಿಮ್ಮ ರಾಜ್ಯದಲ್ಲಿ ಪ್ರದರ್ಶನ ಮಾಡಿ ಎಂದು ಏತಕ್ಕೆ ಹೇಳುವುದಕ್ಕಾಗುವುದಿಲ್ಲ? ಏನಾಗುತ್ತದೆ ಹೇಳುವುದಕ್ಕೆ? ಏನು ತೊಂದರೆ ಇದೆ? ಅದನ್ನು ಸ್ಪಷ್ಟಪಡಿಸಿ ನೀವು ಅದು ಬಿಟ್ಟು ನೀವು ಬೇರೆ ಏನೇನೋ ಹೇಳಿದರೆ ಅದು ಸರಿಯಾದ ಮಾರ್ಗ ಅಲ್ಲ.

ಶ್ರೀ ಎಂ. ಸಿ. ನಾಣಯ್ಯ : ನಮ್ಮ ಕನ್ನಡ ಭಾಷೆಯ ಚಿತ್ರಗಳು ಬೇರೆ ರಾಜ್ಯದಲ್ಲಿ ಪ್ರದರ್ಶನ ಆಗುತ್ತಿಲ್ಲ ಎಂದು ಹೇಳುತ್ತಾ ಇರತಕ್ಕಂಥದ್ದು, ಏತಕ್ಕೆ ಪ್ರದರ್ಶನ ಮಾಡಬಾರದು ಎಂದು ಕೇಳಿ

ಎನ್ನತಕ್ಕಂಥ ವಿಚಾರ ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೆ,ಯಾವ ರಾಜ್ಯಗಳಲ್ಲೂ ನೀವು ಕನ್ನಡ ಚಿತ್ರಗಳನ್ನು ಪ್ರದರ್ಶನ ಮಾಡಬಾರದು ಎಂಬ ನಿರ್ಬಂಧವೂ ಇಲ್ಲ. ಕನ್ನಡ ನಾಡಿನಲ್ಲೂ ಕೂಡ ಆ ನಿರ್ಬಂದ ಇಲ್ಲ. ಈ ರಾಷ್ಟ್ರದಲ್ಲಿ ಒಂದು ಭಾಷೆಯ ಚಿತ್ರವನ್ನು ಪ್ರದರ್ಶನ ಮಾಡಲಿಕ್ಕೆ ಇರತಕ್ಕಂಥದ್ದಕ್ಕೆ ಇಂಥದ್ದೇ ಭಾಷೆಯ ಚಿತ್ರವನ್ನು ನೀವು ಪ್ರದರ್ಶನ ಮಾಡಬೇಕು ಎನ್ನತಕ್ಕ ನಿರ್ಬಂಧ ಕಾನೂನು ಈ ರಾಷ್ಟ್ರದ ಯಾವ ಭಾಗದಲ್ಲೂ ಕೂಡ ಇಲ್ಲ. ಆದರೆ ಕನ್ನಡ ನಾಡಿನಲ್ಲಿ ಕನ್ನಡ ಚಿತ್ರಗಳಿಗೆ ಆದ್ಯತೆಯನ್ನು ಕೊಡಬೇಕು ಎನ್ನತಕ್ಕ ಹಿನ್ನೆಲೆಯಲ್ಲಿ ಇವರೆಲ್ಲರೂ ಒಟ್ಟಾರೆ ಸೇರಿ ಕನ್ನಡ ನಾಡಿನಲ್ಲಿರತಕ್ಕ ಈ ಚಲನಚಿತ್ರಮಂದಿರಗಳಲ್ಲಿ ಕನ್ನಡ ಚಲನಚಿತ್ರ 100 ದಿವಸದವರೆಗೆ ಆರು ತಿಂಗಳವರೆಗೆ ನಡೆಯಬೇಕು ಎನ್ನತಕ್ಕಂಥ ಚಿಂತನೆಯನ್ನು ಏನು ಹೇಳಿದ್ದೀರಿ ಅದರ ಬಗ್ಗೆಯೂ ಅದರ ಜೊತೆ ಚರ್ಚೆಯಾಗುತ್ತಿದೆ. ಕಾನೂನಿನ ಭಾಗದಲ್ಲಿ ನೀವು ಒಂದು ಕಾಯಿದೆಯನ್ನು ತನ್ನಿ ಎಂದು ಹೇಳುತ್ತಿದ್ದಾರೆ. ಮಾನ್ಯ ಸಭಾಧ್ಯಕ್ಷರೆ ಕಾನೂನನ್ನು ತಂದರೆ ನಾಳೆ ಅದು ಜ್ಯುಡಿಷಿಯಲ್ ಸ್ಕ್ರೂಟಿನಿಗೂ ಅದು ಒಪ್ಪಬೇಕಾಗುತ್ತದಲ್ಲ. ಜ್ಯುಡಿಷಿಯಲ್ ಸ್ಕ್ರೂಟಿನಿಗೆ ಒಪ್ಪಬೇಕಾದಂಥ ಕಾಯಿದೆಯನ್ನು ನಾವು ತರಬೇಕಾಗುತ್ತದೆ. ಬಹುಶಃ ಅಂಥ ಒಂದು ಪರಿಸ್ಥಿತಿ ನಿರ್ಮಾಣವಾಗುತ್ತಾ ಇರತಕ್ಕಂಥದ್ದಕ್ಕೆ ಬಹುಶಃ ಕಾನೂನಿನ ಚೌಕಟ್ಟಿನಲ್ಲಿ ಕೂಡ ಅದನ್ನು ವಿಚಾರ ಮಾಡುವುದಕ್ಕೆ ತಯಾರಿದ್ದೇವೆ ಎನ್ನತಕ್ಕ ಮಾತನ್ನೂ ಆಡಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ನನಗನ್ನಿಸುತ್ತದೆ ಇದು ಸರ್ಕಾರದ ತೋರಿಕೆ ಉತ್ತರ. ಈ ತೋರಿಕೆ ಉತ್ತರದಿಂದ ನನಗೇನೂ ಸಮಾಧಾನವಾಗುವುದಿಲ್ಲ. ಇವತ್ತು ಏಳೂವರೆ ಕೋಟಿ ರೂಪಾಯಿ ಸಾಲ ಇದೆ. ಅದರ ಬಗ್ಗೆ ಮಾತನಾಡುತ್ತಲೇ ಇಲ್ಲ ನೀವು. ಏತಕ್ಕೆ ಸ್ವಾಮಿ? ಯಾವಾಗ ಕೊಡುತ್ತೀರಿ? ಕನ್ನಡ ಚಿತ್ರಗಳಿಗೆ ಸಹಾಯಧನ ನೀವು ಯಾವಾಗ ಬಿಡುಗಡೆ ಮಾಡುತ್ತೀರಿ ಹೇಳಿ ಅದನ್ನು.

ಶ್ರೀ ಎಂ.ಸಿ. ನಾಣಯ್ಯ : ಕನ್ನಡ ಚಲನಚಿತ್ರಗಳಿಗೆ ಸಹಾಯಧನ ಕೊಡಲಿಕ್ಕೆ ಇರತಕ್ಕಂಥದ್ದು ಸುಮಾರು ನಾಲ್ಕು ಕೋಟಿ ರೂಪಾಯಿ ಬಾಕಿ ಇದೆ. ನೀರು ಕನ್ನಡ ಚಲನಚಿತ್ರಗಳನ್ನು ಎಷ್ಟು ಎತ್ತರಕ್ಕೆ ತರಬೇಕು ಎಂದು ಹೊರಟಿದ್ದೀರೋ ಅದರಲ್ಲಿ ನಾನೂ ಕೂಡ ಇದ್ದೇನೆ. ನಾನು ಇಲ್ಲ ಎಂದು ಹೇಳಲಿಕ್ಕೆ ತಯಾರಿಲ್ಲ. 4 ಕೋಟಿ 36 ಲಕ್ಷ ರೂಪಾಯಿ ಇದೆ. ಅದರಲ್ಲಿ ಈ ವರ್ಷ ಒಂದು ಕೋಟಿ ರೂಪಾಯಿಯನ್ನು ಬಜೆಟ್ಟಿನಲ್ಲಿ ಇಟ್ಟಾಗಿದೆ. ಮಾನ್ಯ ಸಿದ್ದರಾಮಯ್ಯನವರಿಗೆ ಹೇಳಿ ಪುನಃ ಈ ವರ್ಷಕ್ಕೆ ಇರತಕ್ಕಂಥದ್ದು ಅದನ್ನೂ ಕೂಡ ಈಗಾಗಲೇ ಬಿಡುಗಡೆ ಮಾಡಿದ್ದೇವೆ. 1993-94ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಎಲ್ಲಾ ಚಲನಚಿತ್ರಗಳಿಗೂ ಸಬ್ಸಿಡಿ ಕೊಟ್ಟಾಗಿದೆ. ಈಗ 1994-95ನೇ ಸಾಲಿನಲ್ಲಿ ಕೊಡುವುದಕ್ಕೆ ಪುನಃ ಅರ್ಥ ಇಲಾಖೆಯನ್ನು ದಯವಿಟ್ಟು 2 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂದು ಕೇಳಿದ್ದೇನೆ. ಇದರ ಬಗ್ಗೆ ಅವರು ಚಿಂತನೆ ಮಾಡುತ್ತಿದ್ದಾರೆ.

ಶ್ರೀ ಎಂ. ಶ್ರೀನಿವಾಸ್ : ಮೊಯಿಲಿಯವರು ಎಷ್ಟು ಕೊಟ್ಟರು ?

ಶ್ರೀ ಎಂ. ಸಿ. ನಾಣಯ್ಯ : ಮೊಯಿಲಿಯವರು ಎಷ್ಟು ಕೊಟ್ಟರು ಎಂದು ಹೇಳುವುದಕ್ಕಿಂತ, ಅವರ ಕಾಲ ಇವರ ಕಾಲ ಅಂತ ನಾನು ಹೇಳುವುದಿಲ್ಲ. ಆಯಾ ಕಾಲದಲ್ಲಿ ಸ್ವಲ್ಪಮಟ್ಟಿಗೆ ಹಣದ ಒಂದು ಅಡಚಣೆ ಬಂದಾಗ ಪೂರ್ತಿಯಾಗಿ ಆಯಾ ಕಾಲಕ್ಕೆ ಕೊಡಲಿಕ್ಕೆ ಆಗಲಿಲ್ಲ. ಯಾವ ಸರ್ಕಾರವೇ ಆಗಲೀ

ಕೊಡಲಿಕ್ಕೆ ಆಗಲಿಲ್ಲ. ಈಗ ನಾಲ್ಕು ಲಕ್ಷ ರೂಪಾಯಿಗಳನ್ನು ಒಂದು ಚಲನಚಿತ್ರಕ್ಕೆ ಕೊಡಬೇಕಾಗಿದೆ. ಆದರೆ ಇವತ್ತು ಒಂದು ನೀತಿಯ ಪ್ರಶ್ನೆಯನ್ನು ಎತ್ತಿದ್ದೇವೆ, ಅದರಲ್ಲಿ ತಾವೆಲ್ಲರೂ ಹೇಳಿದ್ದೀರಿ. ಈ ಸಹಾಯಧನವನ್ನು ಕೊಡುವಾಗ ದಯವಿಟ್ಟು ಆ ಚಿತ್ರದ ಗುಣಮಟ್ಟವನ್ನು ನೋಡಿ, ಕಳಪೆ ಚಿತ್ರಕ್ಕೆ ಕೊಡುವುದು ಎಂಬ ವಿಚಾರವನ್ನು ಈ ಸದನದಲ್ಲಿ ಬಹುತೇಕ ಜನ ವ್ಯಕ್ತಮಾಡಿದ್ದಾರೆ ಮಾನ್ಯ ಸಭಾಪತಿಗಳೆ. ಇಲ್ಲ ಅಂತ ಹೇಳಿದರೆ ನಾನು ಒಪ್ಪುವುದಿಲ್ಲ. ಇವತ್ತು ಎಲ್ಲ ಭಾಗದಲ್ಲೂ ಕೂಡ ಅದರ ಬಗ್ಗೆ ಚಿಂತನೆ ಕೊಡಬಾರದು ನಡೆದಿದೆ, ಇವತ್ತು ಅದೂ ಕೂಡ ಸರ್ಕಾರದ ಚಿಂತನೆಯಲ್ಲಿದೆ. ನಾನು ಹೇಳುತ್ತೇನೆ ಒಂದು ಚಿತ್ರ ಬರೀ ಅಶ್ಲೀಲತೆ, ಕ್ರೌರ್ಯ, ಲೈಂಗಿಕತೆಯನ್ನು ಪ್ರಚೋದನೆ ಮಾಡುತ್ತಾ ಇರತಕ್ಕಂಥ ಚಿತ್ರಕ್ಕೂ ಕೂಡ ಸರ್ಕಾರದ ವತಿಯಿಂದ ಸಹಾಯಧನವನ್ನು ಕೊಡಬೇಕು, ಟ್ಯಾಕ್ಸ ಎಗ್ಸೆಂಪಷನ್ ಕೂಡಬೇಕೆಂಬುದು, ಸರ್ಕಾರದ ನೀತಿಯ ಪ್ರಶ್ನೆಯಲ್ಲ ಎಂದು ತಾವೆಲ್ಲರೂ ಕೂಡ ಕಳೆದ ಅಧಿವೇಶನದಲ್ಲಿ ಚರ್ಚೆ ಮಾಡುವಾಗ ಹೇಳಿದ್ದೀರಿ. ಇದನ್ನು ಗಮನದಲ್ಲಿಟ್ಟುಕೊಂಡೇ ಮಾನ್ಯ ಸಭಾಪತಿಗಳೆ ಇದಕ್ಕೆ ಒಂದು ಕಾರ್ಯಕ್ರಮವನ್ನು ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಇದರಲ್ಲಿ ಒಂದು ಏನೆಂದರೆ ಸಹಾಯಧನಕ್ಕೂ ಗುಣಮಟ್ಟಕ್ಕೂ ಸಂಬಂಧ ಇಲ್ಲ. ಸಹಾಯಧನ ಕೊಡತಕ್ಕಂಥದ್ದು ಸರ್ಕಾರದ ನೀತಿ. ಕನ್ನಡ ಚಿತ್ರರಂಗದ ಬೆಳವಣಿಗೆ ಸಹಾಯಧನ ಕೊಡತಕ್ಕಂಥದ್ದು ಸರ್ಕಾರದ ನೀತಿ. ಅದಕ್ಕೊಂದು ಗುಣಮಟ್ಟ ಅದನ್ನೆಲ್ಲಾ ಮಾಡಿ ಆ ಒಂದು ಉದ್ದೇಶಕ್ಕೆ ಭಂಗ ತರುವುದಕ್ಕೆ ಹೋಗಬೇಡಿ. ನಿಮ್ಮ ಸರ್ಕಾರಕ್ಕೆ ಮನಸ್ಸಿಲ್ಲ. ಕನ್ನಡ ಚಿತ್ರವನ್ನು ಕಡ್ಡಾಯವಾಗಿ ಪ್ರದರ್ಶನ ಮಾಡತಕ್ಕ ತೀರ್ಮಾನ ನಿಮ್ಮದಿಲ್ಲ ಎಂದು ಹೇಳಿ ನಾನು ಸಭಾತ್ಯಾಗ ಮಾಡುತ್ತೇನೆ. ಸರಿಯಲ್ಲ ಇದು. ನಿಮ್ಮ ನೀತಿ ಸರಿಯಾದುದಲ್ಲ. xxxx

ಶ್ರೀ ಎಂ. ಸಿ. ನಾಣಯ್ಯ : ನಾವೆಲ್ಲರೂ ಕನ್ನಡಿಗರೆ. ಕನ್ನಡದ ಬಗ್ಗೆ ನಮಗೆಲ್ಲರಿಗೂ ಅಭಿಮಾನ ಇದೆ. ಆದ್ದರಿಂದ ನೀವು ಇದರಲ್ಲಿ, ನಾವು ಪರಭಾಷೀಯರು ನೀವು ಮಾತ್ರ ಕನ್ನಡಿಗರು ಎನ್ನುವ ಭಾವನೆ ಬೇಕಾಗಿಲ್ಲ. ಕನ್ನಡ ನಾಡಿನಲ್ಲಿರತಕ್ಕ ಪ್ರತಿಯೊಬ್ಬ ಕನ್ನಡಿಗ, ಕನ್ನಡದ ಮೇಲೆ ಅಭಿಮಾನ ಇರತಕ್ಕಂಥವರು. ನಿಮಗಿಂತ ಕಡಿಮೆ ಅಭಿಮಾನ ನಮಗಿಲ್ಲ. ದಯವಿಟ್ಟು ತಿಳಿದುಕೊಳ್ಳಬೇಕು ತಾವು.

ಶ್ರೀ ವಾಟಾಳ್ ನಾಗರಾಜ್ : ಅದರ ಬಗ್ಗೆ ತೀರ್ಮಾನ ಮಾಡುತ್ತಾರೆ. (ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ಅವರು ತಮ್ಮ ಸ್ಥಾನವನ್ನು ಬಿಟ್ಟು ಸಭಾಧ್ಯಕ್ಷರ ಪೀಠದ ಬಳಿ ನಿಂತು ಮಾತನಾಡುತ್ತಿದ್ದರು. ಆದ್ದರಿಂದ ಅದನ್ನು ದಾಖಲಿಸಲಿಲ್ಲ).

(ಗೊಂದಲ)

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಸಭಾಧ್ಯಕ್ಷರೆ, ದಯವಿಟ್ಟು ಅದನ್ನು ಕಡತದಿಂದ ತೆಗೆಯಬೇಕಾಗುತ್ತದೆ. ಈ ತರಹದ ಮಾತನ್ನಾಡುತ್ತಿರುವುದು ಯಾರಿಗೂ ಗೌರವ ತರುವಂಥದ್ದಲ್ಲ. ನಾವೆಲ್ಲಾ ಕನ್ನಡಿಗರು ಎಂಬ ಅಭಿಮಾನ ನಮ್ಮಲ್ಲೂ ಕೂಡ ಇದೆ.

---

xxxx ಅಧ್ಯಕ್ಷರು ಆದೇಶದ ಮೇರೆಗೆ ತೆಗೆದು ಹಾಕಲಾಗಿದೆ.

(ಗೊಂದಲ)

ಶ್ರೀ ಎಂ. ಸಿ. ನಾಣಯ್ಯ : ಇದು ಸದನಕ್ಕೆ ಮಾಡುತ್ತಿರುವ ಅಗೌರವ. ಇದು ಕನ್ನಡ ನಾಡಿನ ಸದನ. ಮಾನ್ಯ ಸಭಾಧ್ಯಕ್ಷರೆ, ದಯವಿಟ್ಟು ಅದನ್ನು ಕಡತದಿಂದ ತೆಗೆದುಹಾಕಬೇಕು.

(ಶ್ರೀ ವಾಟಾಳ್ ನಾಗರಾಜ್ ಅವರು ಸಭಾತ್ಯಾಗ ಮಾಡಿದರು).

ಶ್ರೀ ಚಂದ್ರಕಾಂತ ಜಿ. ಬೆಲ್ಲದ್ : ಸರ್ಕಾರ ಸರಿಯಾದಂಥ ನಿಲುವು ತೆಗೆದುಕೊಳ್ಳಬೇಕಾಗುತ್ತದೆ. ಬೇರೆ ರಾಜ್ಯದಲ್ಲಿ, ನಮ್ಮ ಸುತ್ತಲಿನ ರಾಜ್ಯದಲ್ಲಿ ಅವರಿಗಿರುವಂಥ ಭಾಷಾಭಿಮಾನ, ಅಲ್ಲಿ ಅವರು ಯಾವ ಚಿತ್ರಗಳಿಗೆ ಪ್ರಾಧಾನ್ಯತೆ ಕೊಡುತ್ತಿದ್ದಾರೆ ನೋಡಬೇಕು. ಬೇರೆ ರಾಜ್ಯಗಳ ಭಾಷೆಗಳು ಸತತವಾಗಿ ಇಲ್ಲಿ ಬೆಳೆಯುತ್ತಿವೆ. ಆ ದೃಷ್ಟಿಯಿಂದ ನಮ್ಮಲ್ಲಿ ಕನ್ನಡ ಚಿತ್ರಕ್ಕೆ ಸಾಕಷ್ಟು ಆದ್ಯತೆ ಕೊಡಬೇಕಾಗಿದೆ. ಸರ್ಕಾರ ಅದಕ್ಕೆ ಸಹಾಯಧನವನ್ನು ಕೊಡಬೇಕಾಗಿದೆ. ಪ್ರದರ್ಶನಕ್ಕೂ ಸಹ ಸರಿಯಾದಂಥ ಅವಕಾಶ ಮಾಡಿಕೊಡಬೇಕಾಗಿದೆ. ಈ ದಿಸೆಯಲ್ಲಿ ಸರ್ಕಾರ ಮುತುವರ್ಜಿ ವಹಿಸಬೇಕಾಗಿದೆ. ಕನ್ನಡಕ್ಕೆ ಪ್ರಾಧಾನ್ಯತೆ ಇರಲೇಬೇಕು.

ಉಪಾಧ್ಯಕ್ಷರು : ಮಾತನಾಡುವುದಕ್ಕೆ ಕಿಮ್ಮಿತ್ತಿಲ್ಲವೇನು? ಯಡಿಯೂರಪ್ಪನವರೇ ನೀವು ಹೇಳುವುದಕ್ಕಾಗುವುದಿಲ್ಲ ಅಂದರೆ ಏನು ಮಾಡುವುದು?

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದನ್ನು ನೊಂದು ಒಂದು ಮಾತು ಹೇಳುತ್ತೇನೆ. ತಾವು ನಾನು ಹೇಳುವುದನ್ನು ಗಮನಿಸಬೇಕು. ಬೆಳಿಗ್ಗೆಯಿಂದ ಶೂನ್ಯವೇಳೆಯಲ್ಲಿ ಐದಾರು ವಿಷಯಗಳನ್ನು ಪ್ರಮುಖವಾಗಿ ಪ್ರಸ್ತಾಪ ಮಾಡಿದರು. 10-15 ನಿಮಿಷದಲ್ಲಿ ನಾವು ಮುಗಿಸಿದ್ದೇವೆ. ಪ್ರಮುಖವಾದ ವಿಷಯ ಅದಲ್ಲವೆ? ಯಾರು ರೈಸ್ ಮಾಡುತ್ತಾರೆ ಅವರ ಪ್ರಮುಖವಾದ ಪಾಯಿಂಟಗೆ ಉತ್ತರ ಕೊಟ್ಟು ಅದನ್ನು ಮುಗಿಸದೇ, ಎರಡು ಗಂಟೆಯಿಂದ ರಾಜ್ಯಪಾಲರ ಭಾಷಣದ ಮೇಲೆ ಭಾಷಣ ಮಾಡಬೇಕಾಗಿದೆ; ಇದು ಅತ್ಯಂತ ಪ್ರಮುಖವಾದುದು ಕನ್ನಡದ ಬಗ್ಗೆ. ತಾವು ನಿಯಂತ್ರಣ ಮಾಡಿ. ನಾವು ಯಾರೂ ಮಾತನಾಡಿಲ್ಲ.

ಉಪಾಧ್ಯಕ್ಷರು : ಎಲ್ಲಾ ಸದಸ್ಯರು ಸಹಕಾರ ಮಾಡದಿದ್ದರೆ ನಿಯಂತ್ರಣ ಮಾಡುವುದು ಹೇಗೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ಇಲ್ಲಿ ಕುಳಿತಿರುವವರು ಯಾವುದಾದರೂ ವಿಷಯದ ಬಗ್ಗೆ ಹತ್ತು ನಿಮಿಷಕ್ಕಿಂತ ಹೆಚ್ಚು ಮಾತನಾಡಿದ್ದೇವೆಯೇ? ತಾವು ಗಮನಿಸಿ. ಇವತ್ತು ಗಂಟೆಗಟ್ಟಲೆ ಮಾತನಾಡುವುದಕ್ಕೆ ಅನಿವಾರ್ಯವಾಗಿ ತಾವು ಅವಕಾಶ ಕೊಟ್ಟಿರಬಹುದು. ನಾವು ಪೂರ್ಣ ಸಹಕಾರ ಕೊಡುವುದಕ್ಕೆ ರೆಡಿಯಿದ್ದೇವೆ. ಆದರೆ ಸರ್ಕಾರದಲ್ಲಿ ಇವತ್ತಿನ ದಿವಸ ಸ್ಪಷ್ಟ ನಿಲುವಿಲ್ಲ. ಅವರದೇನು ಬೇಡಿಕೆ ಇತ್ತು? ಆರೇಳು ಕೋಟಿ ರೂಪಾಯಿ ಬಿಡುಗಡೆ ಮಾಡಿ ಅಂತ. ಕನ್ನಡದ ಬಗ್ಗೆ ಬಹಳ ವಿಷಯಗಳನ್ನು ಮಾತನಾಡಿ ಹಣ ಬಿಡುಗಡೆ ಮಾಡುತ್ತೇನೆ ಅಂತಲೂ ಹೇಳಲಿಲ್ಲ; ಸರ್ಕಾರ ಡೋಲಾಯಮಾನ ಸ್ಥಿತಿಯಲ್ಲಿರುವಾಗ ಸಹಜವಾಗಿ ಗಮನ ಸೆಳೆಯುವ ಪರಿಸ್ಥಿತಿ ಅನಿವಾರ್ಯವಾಗಿ ಬರುತ್ತದೆ. ನಾವು ಪೂರ್ಣ ಸಹಕಾರ ಕೊಡುವುದಕ್ಕೆ ಸಿದ್ಧರಿದ್ದೇವೆ. ಸರ್ಕಾರ ಈಗಲಾದರೂ ಗೊಂದಲಕ್ಕೆ

ಅವಕಾಶ ಮಾಡಿಕೊಡದೆ, ಎಲ್ಲರಿಗೂ ಕನ್ನಡದ ಬಗ್ಗೆ ಕಳಕಳಿ ಇದೆ. ಯಾರಿಗೂ ಅದರ ಬಗ್ಗೆ ವ್ಯತ್ಯಾಸ ಇಲ್ಲ. ಸರ್ಕಾರಕ್ಕೆ ಕಳಕಳಿ ಇಲ್ಲ ಎಂದು ನಾನು ಹೇಳುವುದಕ್ಕೆ ಸಿದ್ಧವಾಗಿಲ್ಲ. ದಯಮಾಡಿ ಅದಷ್ಟು ಬೇಗ ಸಮಸ್ಯೆಯನ್ನು ಬಗೆಹರಿಸಿ. ಅವರ ಬೇಡಿಕೆಯನ್ನು ಈಡೇರಿಸಿ ಎನ್ನುವಂಥ ಮಾತನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಉಪಾಧ್ಯಕ್ಷರು : ಸನ್ಮಾನ್ಯ ಸದಸ್ಯರಾದಂಥ ವಾಟಾಳ್ ನಾಗರಾಜ್ ಅವರು ಮಾತನಾಡತಕ್ಕಂಥ ಸಂದರ್ಭದಲ್ಲಿ ಏನು ಪದ ಬಳಸಿದ್ದಾರೆ ಅದನ್ನು ಕಡತದಿಂದ ತೆಗೆದುಹಾಕಿದ್ದೇನೆ.

ಶ್ರೀ ಎಸ್. ಬಂಗಾರಪ್ಪ : ಅಲ್ಲಿ ನಿಂತುಕೊಂಡು ಭಾಷಣ ಮಾಡಿದಿರೆ ಅದು ರೇಕಾರ್ಡಗೆ ಹೋಗುವುದಿಲ್ಲ. ನೀವು ಏತಕ್ಕೆ ಅದನ್ನು ಹೇಳುತ್ತೀರಿ?

ಸಕಲೇಶಪುರದ ಪುರಸಭೆಯ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆ.

+ಶ್ರೀ ಬಿ. ಶಿವರಾಮು : ಮಾನ್ಯ ಅಧ್ಯಕ್ಷರೆ, ಸಕಲೇಶಪುರದ ಪುರಸಭೆಯ ಚುನಾವಣೆ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆ 13-2-1996ಕ್ಕೆ ನಿಗದಿಯಾಗಿತ್ತು. ಅವತ್ತು ನಾಮಪತ್ರವನ್ನು ಕೂಡ ತಹಶೀಲ್ದಾರ್‌ರವರು ಏನು ಚುನಾವಣಾಧಿಕಾರಿಯಾಗಿದ್ದರು ಅವರ ಸಮ್ಮುಖದಲ್ಲಿ ಸಲ್ಲಿಕೆ ಕೂಡ ಆಗುತ್ತಿತ್ತು. ನಾಮಪತ್ರ ಸಲ್ಲಿಕೆ ಏನು ಆಗಿತ್ತೋ ಅವರ ನಾಮಪತ್ರ ಸಲ್ಲಿಸಿದಂಥ ಕಡತವನ್ನೇ ಅಪಹರಿಸಿಕೊಂಡುಹೋದರು, ಹೊತ್ತುಕೊಂಡು ಹೋದರು ಅನ್ನತಕ್ಕಂಥ ಒಂದು ಕಂಪ್ಲೇಂಟನ್ನೂ ಚುನಾವಣಾಧಿಕಾರಿಯಾಗಿ ತಹಶೀಲ್ದಾರರು ಏನು ಇದ್ದರು ಅವರು ಕೊಟ್ಟಿದ್ದಾರೆ. ಇಲ್ಲಿಯವರೆಗೆ ಏನು ಕಂಪ್ಲೇಂಟ್ ಕೊಟ್ಟಿದ್ದಾರೆ ಅದರ ಬಗ್ಗೆ ಯಾವುದೇ ರೀತಿ ಕ್ರಮವನ್ನು ತೆಗೆದುಕೊಳ್ಳುವಂಥದ್ದು ಪೋಲೀಸ್ ಇಲಾಖೆಯಿಂದ ಆಗಿಲ್ಲ. ಅಪರಾಧಿ ಯಾರು ಎನ್ನೆವುದನ್ನು ಗುರುತು ಮಾಡತಕ್ಕಂಥದ್ದು ಆಗಿಲ್ಲ. ಎಫ್.ಐ.ಆರ್. ಕಾಪಿಯಲ್ಲಿ ಸ್ಪಷ್ಟವಾಗಿ ತಹಶೀಲ್ದಾರರವರು ಕೊಡುತ್ತಾರೆ. ಅಧ್ಯಕ್ಷತೆಗೆ ನಾಮಪತ್ರವನ್ನು ಸಲ್ಲಿಸುವುದಕ್ಕೆ ಶ್ರೀಮತಿ ಚಂದ್ರಮ್ಮನವರು ಬಂದಿದ್ದರು. ಉಪಾಧ್ಯಕ್ಷರ ಹುದ್ದೆಗೆ ನಾಮಪತ್ರವನ್ನು ಸಲ್ಲಿಸುವುದಕ್ಕೆ ಮಣಿ ಎನ್ನತಕ್ಕವರು ಬಂದಿದ್ದರು. ಇಬ್ಬರು ನಾಮಪತ್ರವನ್ನು ಅವರ ಜೊತೆ ಕೂಡಿ ಬಂದಂಥ ಜನ ಸಲ್ಲಿಸಿ ನಾನು ಅವರಿಗೆ ಹಿಂಬರಹವನ್ನು ಕೊಡತಕ್ಕಂಥ ಸಂದರ್ಭದಲ್ಲಿ, ಆ ನಾಮಪತ್ರವನ್ನು ಹಾಕಿದ್ದಂಥ ಕಡತವನ್ನು ಹೊತ್ತುಕೊಂಡು ಹೋದರು ಎಂದು ಹೇಳಿ ಸ್ಪಷ್ಟವಾಗಿ ತಹಶೀಲ್ದಾರರು ಕೊಟ್ಟಿದ್ದಾರೆ ಅಧ್ಯಕ್ಷರೆ, ಅವರ ಜೊತೆ ಇದ್ದವರು ಯಾರು ಯಾರು ಎಂದು ಅವರ ಹೆಸರನ್ನು ಅವರ ಕಂಪ್ಲೇಂಟಿನಲ್ಲಿ ಕೊಡತಕ್ಕಂಥದ್ದಾಗಿದೆ. ಈ ಸಂದರ್ಭ ಹೇಗಿತ್ತು ಅಂದರೆ ಅಧ್ಯಕ್ಷತೆ ಎಲ್ಲಾ ಒಂದೇ ಪಕ್ಷದವರು. ತಹಶೀಲ್ದಾರರ ತಾಲ್ಲೂಕು ಕಛೇರಿಯಲ್ಲಿ ಚುನಾವಣೆ 13 ನೇ ತಾರೀಖು ೮ ಗಂಟೆಯಿಂದ 12 ಗಂಟೆವರೆಗೆ.

1.30 ಪಿ.ಎಂ.

ನಾಮಿನೇಷನ್ ಮಾಡಿದಂತಹ ಕಾಲ 8.27 ನಿಮಿಷ. ತಾಲ್ಲೂಕು ಆಫೀಸ್ ಎಲ್ಲಿದೆ ಅಂದರೆ ಪೋಲೀಸ್ ಸ್ಟೇಷನ್ ಎದುರುಗಡೆ 50 ಅಡಿ ದೂರದಲ್ಲಿದೆಯೆಂದು ಅವರೇ ಹೇಳುತ್ತಾರೆ.